Demand No. 51—Village and Small Industries (Excluding Sericulture)

"That a sum not exceeding Rs. 3,87,13,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Village and Small Industries (Excluding Sericulture)."

Demand No. 52—Sericulture

"That a sum not exceeding Rs. 1,13,67,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in espect of "Sericulture."

NON-OFFICIAL RESOLUTION

Re : recommending the Government of India to conduct caste-wise census of the people in the State [Debate Continued]

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು) — ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಹನುಮೇಗೌಡರು ತಂದಿರತಕ್ಕ ಖಾಸಗೀ ನಿರ್ಣಯದ ಪರವಾಗಿ ನಮ್ಮ ನಾಯಕರಾದ ಶ್ರೀಮಾನ್ ದೇವೇಗೌಡರವರು ಇದರ ಬಗ್ಗೆ ಕೂಲಂಕುಷವಾಗಿ, ದೀರ್ಘವಾಗಿ ಚರ್ಚೆ ಮಾಡಲಿರುವುದರಿಂದ ನಾನು ಕೆಲವೇ ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುವವನಿದ್ದೇನೆ.

ಸನ್ಮಾನ್ಯ ಹನುಮೇಗೌಡರು ತಮ್ಮ ನಿರ್ಣಯದಲ್ಲಿ ೧೯೩೧ ರಿಂದೀಚೆಗೆ ಜನ ಗಣತಿಯನ್ನು ತೆಗೆಯಬೇಕಾದರೆ ಜಾತಿ ಕ್ರಮವನ್ನು ಏನು ಕೈ ಬಿಟ್ಟಿದ್ದಾರೆ, ಅದನ್ನು ಮತ್ತೆ ಜಾರಿಗೆ ತರಬೇಕೆಂದು ಹೇಳಿ ಅದನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ನಾವೆಲ್ಲರೂ ವಿಶಾಲ ಹೃದಯದಿಂದ ಪ್ರಪಂಚದಲ್ಲಿರತಕ್ಕಂಥ ಮಾನವ ಕುಲವೆಲ್ಲಾ ಒಂದೇ ಎನ್ನತಕ್ಕಂಥ ವಾದವನ್ನು ಒಪ್ಪುವುದಾದರೂ ಸಹ ಈ ಒಂದು ವಾದದ ಅಡಿಯಲ್ಲಿ ನಮ್ಮ ನಾಯಕರು, ನಿಮ್ಮ ನಾಯಕರು ಈ ಒಂದು ಜಾತಿಯ ಸ್ವಾರ್ಥತೆಯನ್ನು, ಜಾತಿ ವಾದವನ್ನು ತಮ್ಮ ತಮ್ಮ ಮುಂದಿಟ್ಟು ಕೊಂಡು ಇವತ್ತು ಸಮಾಜದಲ್ಲಿ ಯಾವುದೇ ವರ್ಗ ಮುಂದಕ್ಕೆ ಬರುವುದಕ್ಕೆ ಅನೇಕ ಅಡ್ಡಿಗಳನ್ನು ತರುತ್ತಾ ಇದ್ದಾರೆ. ಇದಕ್ಕೆ ನಮ್ಮ ನಾಯಕರುಗಳು ಜವಾಬ್ದಾರಿಯೇ ವಿನಹ, ಸಾಮಾನ್ಯ ಜನತೆಯಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಅದರಲ್ಲೂ ಗಾಂಧೀಜಿಯವರ ತತ್ವಗಳನ್ನು ಅನುಸರಿಸಿ ಕೊಂಡು ಬಂದಂಥ ಕಾಂಗ್ರೆಸ್ ಸರ್ಕಾರ ಈ ಜಾತಿಯನ್ನು ಜನತೆಯಲ್ಲಿ ಬೇರು ಬಿಡುವ ಹಾಗೆ ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಬಗ್ಗೆ ನಾಯಕರು ಹೇಳಿದಂಥ ಮಾತನ್ನು, ನನ್ನ ಸ್ವಂತ ಅನುಭವದಿಂದ, ಕಣ್ಣಾರೆ ಕಂಡಂಥ ವಿಚಾರಗಳನ್ನು ಈ ಸಭೆಯ ಮುಂದಿಡತಕ್ಕಂಥದ್ದು ನನ್ನ ಕರ್ತವ್ಯ ಎಂದು ನಾನು ತಿಳಿದಿದ್ದೇನೆ. ಯಾರು ಪ್ರಾಮಾಣಿಕವಾಗಿ ಜಾತ್ಯಾತೀತ ರಾಷ್ಟ್ರ ನಿರ್ಮಾಣ ಮಾಡುತ್ತೇವೆ ಎಂದು ಹೇಳಿದ ಮೇಲೆ ಅಧಿಕಾರಕ್ಕೆ ಬರುತ್ತಾರೆ. ನಾನು ಅನೇಕ ಮಂತ್ರಿಗಳ ಕಛೇರಿಗೆ ನಾವು ಹೋಗಿ ನೋಡಿದಾಗ ನನಗೆ ತಿಳಿದು ಬಂದದ್ದು ಕೇವಲ ಅವರ ಕೋಮಿನವರು, ಅವರ ಜಾತಿಯವರನ್ನು ಕರೆ ಹಾಕಿ ಅವರು ಹೇಳತಕ್ಕಂಥ ಮಾತುಗಳನ್ನು ಕೇಳಿ, ಅದು ಸರಿಯೋ ತಪ್ಪೋ ಅದನ್ನು ನಡೆಸಿ ಕೊಡತಕ್ಕಂಥ ಭಾವನೆ ಕೆಲವು ಮಂತ್ರಿಗಳಲ್ಲಿ ಇದೆ. ಎಲ್ಲಾ ಮಂತ್ರಿಗಳೂ ಅದೇ ರೀತಿ ಇದ್ದಾರೆ ಎಂದು ಹೇಳುವುದಕ್ಕೆ ನಾನು ಸಿದ್ಧವಿಲ್ಲ. ಪ್ರಾಮಾಣಿಕರೂ ಇದ್ದಾರೆ. ದಕ್ಷವಂತರೂ ಇದ್ದಾರೆ.

ಶ್ರೀ ಎನ್. ರಾಚಯ್ಯ.— ಅಂಥವರು ಯಾರು ? ಅವರ ಹೆಸರನ್ನು ಹೇಳಿ.

ಶ್ರೀ ಟಿ. ಎಂ. ಮಂಜುನಾಥ್.— ಕೆಲವರನ್ನು ಹೊಗಳಿದರೆ ಅಹರೂ ಕೂಡ ಅಂಥ ಕಾರ್ಯಕ್ರಮಕ್ಕೆ ಇಳಿಯುತ್ತಾರೆ ಎಂದು ಅರ್ಥವಿದೆ. ಕೆಲವರು ನಿಷ್ಠೆಯಿಂದ ಕೆಲಸ ಮಾಡತಕ್ಕ ಮಂತ್ರಿಗಳು ಇದ್ದರೆ, ಆದರೆ ಅವರು ಎಚ್ಚರಿಕೆಯನ್ನು ತೆಗೆದು ಕೊಳ್ಳಬೇಕು. ಒಂದು ಮಂತ್ರಿ ಸ್ಥಾನಕ್ಕೆ ಬರಬೇಕಾದರೆ, ಸಮಾಜದ ಎಲ್ಲಾ ಜನತೆಯ ಆಶೀರ್ವಾದವನ್ನು ಅವರ ಪ್ರೀತಿಯನ್ನು ಸಹಕಾರವನ್ನು ತೆಗೆದುಕೊಂಡು ಅಧಿಕಾರದ ಗದ್ದುಗೆಗೆ ಬಂದಮೇಲೆ ಕೇವಲ ಒಂದು ಜಾತಿಯ ಪಿಡುಗನ್ನು ಜನತೆಯ ಮೇಲೆ ಹರಡತಕ್ಕಂಥ ಒಂದು ಕಾರ್ಯವನ್ನು ಮಾಡಿದರೆ, ಅದರಿಂದ ಸಮಾಜವಾದಕ್ಕೆ ಒಂದು ಘಾತುಕವಾಗುತ್ತದೆಂದು ಹೇಳ ಬಯಸುತ್ತೇನೆ. 'ಕನ್ನಡ ಪ್ರಭ'ದಲ್ಲಿ ಒಂದು ಸುದ್ದಿ ವರದಿಯಾಗಿದೆ. ಮಾನ್ಯ ಮಂತ್ರಿಗಳಾದ ರಂಗನಾಥ್ ರವರು ಮಂಗಳೂರಿಗೆ ಹೋದಾಗ ಅಲ್ಲಿಯ ಜನಸಂಘದವರು ಅವರ ಕಾರಿನ ಮೇಲೆ ಕಲ್ಲನ್ನು ಒಗೆದರು ಎಂದು ಸುದ್ದಿ ಬಂದಿದೆ. ಇದರ ವಿರುದ್ಧ ಒಂದು ಪ್ರತೀಕಾರವನ್ನು ತೆಗೆದುಕೊಳ್ಳುವುದಕೋಸ್ಕರ ಆಡಳಿತ ಕಾಂಗ್ರೆಸಿನ ದಲಿತ ವರ್ಗದ ಯುವಕ ಮುಖಂಡರು ಕತ್ತೆಗಳಿಗೆ, ನಾಯಿಗಳಿಗೆ ಜನಿವಾರವನ್ನು ಹಾಕಿ ಬ್ರಾಹ್ಮಣರ ಜಾತಿಗೆ ಅವಮಾನ ಮಾಡಿ ಪ್ರತಿಕಾರವನ್ನು ಮಾಡುತ್ತೇವೆಂದು ಹೇಳಬೇಕಾದರೆ ಯಾವ ಒಂದು ಪರಿಸ್ಥಿತಿಯಲ್ಲಿ, ಈ ಒಂದು ಜಾತಿ ಪಿಡುಗು ಎಷ್ಟರಮಟ್ಟಿಗೆ ಸಮಾಜದಲ್ಲಿ ಹರಡುತ್ತಿದೆ ಎನ್ನುವುದನ್ನು ನಾವು ನೋಡಬಹುದು.

ಶ್ರೀ ಕೆ. ಎಚ್. ರಂಗನಾಥ್.— ಮಾನ್ಯ ಸದಸ್ಯರು ಯೀಲ್ಡ್ ಆಗುವುದಾದರೆ, ಒಂದು ಮಾತನ್ನು ಹೇಳುತ್ತೇನೆ. ನಮ್ಮ ಪಾರ್ಟಿಯಿಂದ ಈ ತರಹ ಕತ್ತೆ, ನಾಯಿಗಳಿಗೆ ಜನಿವಾರವನ್ನು ಹಾಕುತ್ತೇವೆಂದು ಹೇಳಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ನಿಮ್ಮ ಪಕ್ಷದ್ದು ಅಂತ ಹೇಳಲಿಲ್ಲ. ಕಾಂಗ್ರೆಸ್ಸಿನ ದಲಿತ ವರ್ಗದ ಯುವಕ ನಾಯಕರು......

ಶ್ರೀ ಕೆ. ಎಚ್. ರಂಗನಾಥ್.— ಆ ರೀತಿ ಯಾರೋ ಬರೆದುಕೊಳ್ಳುತ್ತಾರೆ. ಆದರೆ ನಾನು ಪಕ್ಷದ ಅಧ್ಯಕ್ಷನಾಗಿದ್ದೇನೆ. ನನ್ನ ಅಧ್ಯಕ್ಷತೆಯಲ್ಲಿ ಅಂಥದ್ದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ಅಂಥವರನ್ನು ತಮ್ಮ ಪಕ್ಷದಿಂದ ಈಗಲೇ ಹೊರಗೆ ಹಾಕುತ್ತೇವೆಂದು ಹೇಳಿ.

ಶ್ರೀ ಕೆ. ಎಚ್. ರಂಗನಾಥ್.— ಹೊರಗೆ ಹಾಕುವುದು ಬಿಡುವುದು ಬೇರೆ ಪ್ರಶ್ನೆ. ಜನ ಸಂಘದವರಿಗೆ ದಿನಾ ಕಲ್ಲು ಹೊಡೆಯುವುದೇ ಉದ್ಯೋಗವಾಗಿರುವಾಗ, ಅದನ್ನು ಪ್ರತಿಭಟನೆ ಮಾಡಬೇಕಾಗಿಲ್ಲ. ಅದನ್ನು ಪ್ರತಿಭಟನೆ ಮಾಡಬೇಕೆಂದು ನಮ್ಮ ಪಕ್ಷದಿಂದ ಆದೇಶ ಕೊಟ್ಟಿಲ್ಲ. ಏತಕ್ಕೆ ಬರೆದಿದ್ದಾರೆ, ಯಾರ ಮೇಲೆ ಬರೆದಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆದರೂ ಕೂಡ ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೀರೋ ನನಗೆ ಅರ್ಥವಾಗಲಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ಸನ್ಮಾನ್ಯ ರಂಗನಾಥ್‌ರವರು ಪಕ್ಷದ ಅಧ್ಯಕ್ಷರಾಗಿ ಯಾವ ವಿಧವಾದಂಥ ನಿರ್ದೇಶನವನ್ನು ಕೊಟ್ಟಿಲ್ಲವೆಂದು ಹೇಳಿದ ಮೇಲೆ. ಕಾಂಗ್ರೆಸ್ಸಿನ ಯುವಕರು ಈ ಕಾರ್ಯಕ್ರಮವನ್ನು ಹಾಕಿಕೊಂಡಿರುವುದರಿಂದ, ತಮ್ಮ ಪಕ್ಷಕ್ಕೆ ಮಸಿ ಬಳೆಯುವ ಸಂದರ್ಭ ಇರುವುದರಿಂದ ಅವರ ಬಗ್ಗೆ ಎಚ್ಚರಿಕೆಯನ್ನು ವಹಿಸಿ ಎನ್ನತಕ್ಕಂಥ ಮಾತನ್ನು ಹೇಳ ಬಯಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.— ಇಂಥದಕ್ಕೆ ಅವಕಾಶ ಕೊಡುವುದಿಲ್ಲ. ನಮ್ಮ ಪಕ್ಷದ ಕಾರ್ಯಕರ್ತರಿಗೆ ಇಂಥದ್ದನ್ನು ಮಾಡಕೂಡದು ಎಂದು ನಿರ್ದೇಶನ ಕೊಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.— ನಮ್ಮಲ್ಲಿಗೆ ರಾಜ್ಯಪಾಲರು ಬಂದಿದ್ದರು. ಅವರು ಭಾಷಣ ಮಾಡುತ್ತಿದ್ದಾಗ ಜನಸಂಘದವರು ಪ್ರತಿಭಟನೆ ಮಾಡಿದರು, ಪ್ರಜಾಪ್ರಭುತ್ವದ ಬಗ್ಗೆ ಮಾಡುತ್ತಾರೆ,...

ಶ್ರೀ ಕೆ. ಎಚ್. ರಂಗನಾಥ್.— ಇವತ್ತು ಪ್ರತಿಭಟನೆಯ ನೆವದಲ್ಲಿ ದಾರಿಗೆ ಕಲ್ಲುಗಳನ್ನು ಅಡ್ಡ ಗಟ್ಟಿ ಹಾಕುತ್ತಾರೆ, ನಾಳೆ ತಲೆಯ ಮೇಲೆ ಕಲ್ಲು ಹಾಕಿದರೆ ಪ್ರಜಾಪ್ರಭುತ್ವವಾಗುತ್ತದೆಯೇ ?

ಶ್ರೀ ಟಿ. ಎಂ. ಮಂಜುನಾಥ್.— ಇವತ್ತು ನಿಮಗೆ ಕಲ್ಲು ಹೊಡೆಯುತ್ತಾರೆ, ನಾಳೆ ಇನ್ನೊಬ್ಬರ ಮೇಲೆ ಕಲ್ಲು ಹಾಕುತ್ತಾರೆ. ಇದೇ ರೀತಿ ಮುಂದುವರೆದರೆ ಸಮಾಜವಾದ ಎಲ್ಲಿಗೆ ಹೋಗಿ ಮುಟ್ಟುತ್ತದೆಯೋ ಗೊತ್ತಿಲ್ಲ. ಇಡೀ ಪ್ರಪಂಚದಲ್ಲಿಯೇ ಎಲ್ಲೂ ಅಲ್ಲದೇ ಇರುವಷ್ಟು ಜಾತಿ, ಕುಲ ಗೋತ್ರಗಳು ಭಾರತದಲ್ಲಿ ಹುಟ್ಟಿವೆ. ಈ ಜಾತಿ ಪಿಡುಗು ಹೋಗಿ ಎಲ್ಲವೂ ಹೇಗೆ ಒಂದಾಗುತ್ತದೋ ಗೊತ್ತಿಲ್ಲ. ಈ

ಭೀಕರ ಸಮಸ್ಯೆಯನ್ನು ಪರಿಹರಿಸಲು ನಾವು ನೀವು ಒಂದು ಗೂಡಿದರೂ ಸಹಿತ ಇದಕ ಆಗದೇ ಇರತಕ್ಕ ಸಮಸ್ಯೆ. ಇದರಲ್ಲಿ ಒಳಹೊಕ್ಕು ನೋಡಬೇಕು, ಏತಕೋಸ್ಕರ ಇದು ಬೆಳೆಯುತ್ತಿದೆ ? ಗ್ರಾಮಾಂತರ ಪ್ರದೇಶದಲ್ಲಿ ಬುದ್ಧಿವಂತ ಜನ ಅಧಿಕಾರವನ್ನು ಸ್ವಾಧೀನ ಮಾಡಿಕೊಳ್ಳುವಾಗ ಮತ್ತು ಇನ್ನೂ ಅನೇಕ ಕ್ರಮಂಗಳಲ್ಲಿ ಇದು ಉದ್ಭವವಾಗಿ ನಡೆದುಕೊಂಡು ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಹರಿಜನ ಗಿರಿಜನರನ್ನು ಊರಿನಿಂದ ಹೊರಗೆ ಏತಕ್ಕೆ ಇಡುತ್ತೀರಿ ?

ಶ್ರೀ ಟಿ. ಎಂ. ಮಂಜುನಾಥ್.— ನಾವು ಇಟ್ಟಿಲ್ಲ. ಅದನ್ನು ಹೋಗಲಾಡಿಸಬೇಕಾದ್ದು ಒಬ್ಬರ ಕರ್ತವ್ಯವಲ್ಲ. ಎಲ್ಲರೂ ಮಾಡಬೇಕಾದ ಕರ್ತವ್ಯ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಮಾನ್ಯ ಸದಸ್ಯರು ಇದರಲ್ಲಿ ಪಾರ್ಟಿ ಪಾಲಿಟಿಕ್ಸನ್ನು ತರುತ್ತಿದ್ದಾರೆಂದು ನಾನು ಪಾಯಿಂಟ್ ಆಫ್ ಆರ್ಡರನ್ನು ಎತ್ತುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.— ಸನ್ಮಾನ್ಯ ಅಧ್ಯಕ್ಷರೇ, ಅವರಿಗೆ ನಾನು ಹೇಳತಕ್ಕಂಥ ಉತ್ತರ ವಿಷ್ಟೇ. ಕಾಂಗ್ರೆಸ್ಸಿನ ಧೋರಣೆ ಏನು ಇದೆ. ಏನು ಒಂದು ನೀತಿ ಇದೆ, ಏನು ಒಂದು ಪ್ರಣಾಳಿಕೆ ಇದೆ ಎಂದರೆ, ನೀವು ಜಾತ್ಯಾತೀತ ಸಮಾಜವನ್ನು, ವರ್ಗರಹಿತ ಸಮಾಜವನ್ನು ತರುತ್ತೇವೆಂದು ಜನತೆಯ ಮುಂದೆ ಹೇಳಿದ್ದೀರಿ;

SRI G. PUTTASWAMY.— How is it relevant to this Resolution ? Will you kindly explain ?

ಶ್ರೀ ಟಿ. ಎಂ. ಮಂಜುನಾಥ್.— ಇಂದು ಸಾಮಾನ್ಯ ಜನತೆಯಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಕಾಣದೇ ಇರುವುದರಿಂದ ಮಾನ್ಯ ಹನುಮೇಗೌಡರು ಇಂಥ ನಿರ್ಣಯವನ್ನು ತಂದಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.— ಮಾನ್ಯ ಸದಸ್ಯರು ಮಂಗಳೂರಿನಲ್ಲಿ ನಡೆದ ವಿಷಯ ಹೇಳುತ್ತಿರುವುದು ಈ ರೆಜಲ್ಯೂಷನ್‌ಗೆ ಸುಸಂಗತವಾಗುವುದಿಲ್ಲವೆಂದು ನನ್ನ ಭಾವನೆ ದೂರು ಸ್ವಯಂ ಪ್ರೇರಣೆಯಿಂದ ಆ ರೀತಿ ಮಾಡಿದ್ದಾರೆ ಅದಕ್ಕೆ ಮಂತ್ರಿಗಳು ಜವಾಬ್ದಾರರು ಆಗುವುದಿಲ್ಲ, ಪಕ್ಷದ ಜವಾಬ್ದಾರಿ ಆಗುವುದಿಲ್ಲ. ಆದ್ದರಿಂದ ಸಂಭಂದಪಟ್ಟ ಮಂತ್ರಿಗಳು ಜವಾಬ್ದಾರರು ಎಂದು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಸನ್ಮಾನ್ಯ ಅಧ್ಯಕ್ಷರೇ, ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಟಿ. ಎಂ. ಮಂಜುನಾಥ್ — ಮಾನ್ಯ ಪುಟ್ಟಸ್ವಾಮಿಯವರು ನಾನು ಹೇಳತಕ್ಕದ್ದನ್ನು ತಿಳಿದುಕೊಳ್ಳಬೇಕು. ಮಂತ್ರಿಗಳು ಎಂದರೆ ಕೇವಲ ಪಕ್ಷದ ಮಂತ್ರಿಗಳು ಅಲ್ಲ. ಒಂದು ಜಾತಿಯ ಮಂತ್ರಿಗಳು ಅಲ್ಲ, ಅವರು ಇಡೀ ದೇಶದ ಮಂತ್ರಿಗಳು ಇಡೀ ರಾಜ್ಯದ ಜವಾಬ್ದಾರಿಯನ್ನು ಹೊತ್ತಿರ ತಕ್ಕಂಥ ಮಂತ್ರಿಗಳು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಂಥ ಸಂದರ್ಭದಲ್ಲಿ ಏನಾದರೂ ಅವರಿಗೆ ತೊಂದರೆಯಾದರೆ, ಕೆಡುಕು ಆದರೆ ನಮ್ಮ ನಿಮ್ಮ ಜವಾಬ್ದಾರಿಯಿಂದ ಅವರಿಗೆ ರಕ್ಷಣೆ ಕೊಡಬೇಕಾಗುತ್ತದೆಕ ಅವರಿಗೆ ಕೆಡಕನ್ನು ಬಯಸತಕ್ಕ ವಿಚಾರದಲ್ಲಿ ಯಾರಾದರೂ ಪ್ರೋತ್ಸಾಹ ಕೊಟ್ಟರೆ ಅದು ಸಮಾಜಘಾತುಕತನವಾಗುತ್ತದೆಂದು ನಾನು ಭಾವಿಸುತ್ತೇನೆ. ಈ ಒಂದು ದಿಶೆಯಿಂದ ಜನತೆ ಯಾವ ಮಟ್ಟಕ್ಕೆ ಹೋಗುತ್ತಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕು; ತಾವು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈವೊತ್ತು ಜಾತಿಯಲ್ಲಿ ಹರಿಜನರು ಆದರೂ ಅವರಲ್ಲಿ ಕೆಲವರು ವೀರಶೈವ ಧರ್ಮವನ್ನು ಅನುಸರಿಸುತ್ತಾ ಇದ್ದಾರೆ, ಶಿವಪೂಜೆ ಮಾಡುತ್ತಾ ಇದ್ದಾರೆ ಈ ಸಂದರ್ಭದಲ್ಲಿ ಬಸವಣ್ಣನವರ ಒಂದು ವಚನ ಜ್ಞಾಪಕಕ್ಕೆ ಬರುತ್ತದೆ. ಅದು ಯಾವುದೆಂದರೆ 'ಹೊಲಸು ತಿನ್ನುವವನೇ ಹೊಲೆಯ, ಮಾತಿಗೆ ತಪ್ಪುವವನೆ ಮಾದಿಗ' ಎಂಬಂತೆ ಒಳ್ಳೆಯ ಕೆಲಸ ಮಾಡುವವರು ಆ ಜಾತಿಯಲ್ಲಿ ಹುಟ್ಟಿದ್ದಾರೆ ಎಂದು ಹೇಳುತ್ತೇನೆ.

11-00 A.M.

SRI G. PUTTASWAMY.— The Hon-Member is going beyond the scope of the Resolution.

ಶ್ರೀ ಟಿ. ಎಂ. ಮಂಜುನಾಥ್.— ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಜಿ. ಪುಟ್ಟಸ್ವಾಮಿಯವರು ಸ್ವಲ್ಪ ಮರೆತಿರಬಹುದು. ಸ್ವಾತಂತ್ರ್ಯ ಬರುವ ಮುನ್ನ ಹರಿಜನರ ಸ್ಥಿತಿ ಏನಾಗಿತ್ತು ? ಈವೊತ್ತು ಏನು ಇದೆ ಎಂಬುದನ್ನು ನೋಡಿ. ರಾಜ್ಯಾಂಗ ಬದ್ಧವಾಗಿ ಅವರಿಗೆ ಏನೇನು ಸವಲತ್ತುಗಳು ಕೊಡಬೇಕೋ ಅವೆಲ್ಲಾ ಕೊಡಿಸಿದ ಮೇಲೆ ಈವೊತ್ತು ಅವರ ಪ್ರಗತಿ ಎಷ್ಟರಮಟ್ಟಿಗೆ ಇದೆ

(ಶ್ರೀ ಟಿ. ಎಂ. ಮಂಜುನಾಥ್)

ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು. ಅವರು ಮುಂದಕ್ಕೆ ಬರಬೇಕು, ಬರಲಿ ಸಂತೋಷ. ಅವರೆಲ್ಲರೂ ನಮ್ಮ ಅಣ್ಣ ತಮ್ಮಂದಿರಂತೆ ಬಾಳಬೇಕು, ಸಹೋದರರಂತೆ ಬಾಳಬೇಕು ಎನ್ನುವ ವಾದವನ್ನು ಮುಂದಿಟ್ಟು ಕೊಂಡು ತಾವು ವಾದ ಮಾಡಬೇಕಾಗಿದೆ. ಅವರನ್ನು ಅಲ್ಲಗಳೆಯಬೇಕು ಎನ್ನುವ ಭಾವನೆ ಇಲ್ಲ. ಈವೊತ್ತು ಸಾಮಾಜಿಕವಾಗಿ ಅವರೆಲ್ಲರಿಗೂ ಈ ಪ್ರಜಾ ಪ್ರಭುತ್ವದಲ್ಲಿ ನ್ಯಾಯ ಒದಗಿಸ ಕೊಡಬೇಕು ಎನ್ನುವುದೇ ನಮ್ಮ ವಾದ. ಇದನ್ನು ಬಗೆಹರಿಸಬೇಕಾದರೆ ಏನು ಮಾಡಬೇಕು ? ಸ್ವಾತಂತ್ರ್ಯ ಬಂದ ಮೇಲೆ ಯಾವ ವರ್ಗದ ಜನತೆಯಲ್ಲಿ ಎಷ್ಟೆಷ್ಟರ ಮಟ್ಟಿಗೆ ಶೋಷಣೆ ನಡೆಯುತ್ತಾ ಇದೆ, ಇದನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವ ಒಂದು ಮೂಲ ಉದ್ದೇಶ ಇಟ್ಟು ಕೊಂಡು ಶ್ರೀಮಾನ್ ಕೆ. ಹೆಚ್. ಹನುಮೇಗೌಡರು ಏನೊಂದು ಖಾಸಗೀ ನಿರ್ಣಯವನ್ನು ತಂದಿದ್ದಾರೋ ಅದನ್ನು ತಾವೆಲ್ಲರೂ ಒಮ್ಮತ ದಿಂದ ಒಪ್ಪಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ, ಅಧ್ಯಕ್ಷರು ಮಾತ ನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್ ಡಿ ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಶ್ರೀಮಾನ್ ಕೆ.ಎಚ್. ಹನುಮೇಗೌಡರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಖಾಸಗೀ ನಿರ್ಣಯದ ಮೇಲೆ ಮೂರು ದಿವಸ ಚರ್ಚೆಯಾಗಿ ನಾಲ್ಕನೇ ದಿವಸವೂ ಬಂದು ಮುಟ್ಟಿದೆ. ಈ ವೊತ್ತಿನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲೀ ಮತ್ತು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಲೀ ಇಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಆದರೂ ಕೂಡ ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾನು ತಿಳಿದಿದ್ದೇನೆ. ಇನ್ನು ಈ ನಿರ್ಣಯದ ಮೇಲೆ ಹೇಳುವುದಾದರೆ. ಇದರ ಹಿನ್ನೆಲೆ ಕಳೆದ ೨೫ ವರ್ಷಗಳಲ್ಲಿ, ಅಂದರೆ, ಸ್ವಾತಂತ್ರ್ಯ ಬಂದಮೇಲೆ ಸಮಾಜದಲ್ಲಿರತಕ್ಕಂಥ ಯಾವ ಯಾವ ವರ್ಗಗಳ ಜಾತಿಗಳ ಬೆಳವಣಿಗೆ, ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಎಷ್ಟು ಮಟ್ಟಿಗೆ ಈವೊತ್ತು ಯಾವ ದಿಶೆಯಲ್ಲಿ ನಡೆದಿದೆ ಎನ್ನುವುದನ್ನು ಅನುಕರಣೆ ಮಾಡುವುದಾದರೆ ಜಾತೀಯ ಆಧಾರದ ಮೇಲೆ ನಾವು ಸೆನ್ಸಸ್‌ನ್ನು ತೆಗೆಯಬೇಕು ಎನ್ನುವ ಒಂದು ಹಿನ್ನೆಲೆಯಿಂದ ಈ ನಿರ್ಣಯವನ್ನು ಅವರು ಮಂಡಿಸಿದ್ದಾರೆ. ಶ್ರೀಮಾನ್ ಕೆ. ಎಚ್. ಹನುಮೇಗೌಡರು ತಂದಿರತಕ್ಕಂಥ ನಿರ್ಣಯವನ್ನು ಪೂರ್ವಭಾವಿಯಾಗಿಯೇ ನಾವು ಯೋಚನೆ ಮಾಡಿ ಇದನ್ನು ಅವರ ಮುಖಾಂತರ ಮಂಡಿಸಿದ್ದೇವೆ. ೧೯೪೭ ರಿಂದ ೧೯೭೨ರ ವರೆಗೆ ಅಂದರೆ ಇಲ್ಲಿಯವರೆಗೆ ನಮ್ಮ ಬೆಳವಣಿಗೆ ಯಾವ ದಿಶೆಯಲ್ಲಿ ಸಾಗಿದೆ ಎನ್ನ ತಕ್ಕಂಥಾ ಬಗ್ಗೆ ಪ್ರಶ್ನೆ ಹೊರಬರಬೇಕಾದರೆ ಬಹುಶಃ ಜಾತಿಯ ಆಧಾರದ ಮೇಲೆ ಸೆನ್ಸಸ್ ತೆಗೆಯದೇ ಹೋದರೆ ನಿಖರವಾಗಿ ನಿರ್ಣಯಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಕೇವಲ ಊಹಾಪೋಹದ ಆಧಾರದ ಮೇಲೆ ಅನುಕೂಲ ಸಿಂಧುತ್ವ ಕ್ಕೋಸ್ಕರವಾಗಿ ರಾಜಕಾರಣಿಗಳ ಮೇಲೆ ಆರೋಪಣೆಗಳನ್ನು ಮಾಡ ತಕ್ಕಂಥಾದ್ದು ಯೋಗ್ಯವಲ್ಲ, ಅದನ್ನು ಕೈ ಬಿಡಬೇಕಾಗುತ್ತದೆ, ಇಲ್ಲವೇ ಅದನ್ನು ಮುಂದುವರಿಸಬೇಕು ಎನ್ನುವ ಇಚ್ಛೆ ಇದ್ದರೆ ಅದಕ್ಕೆ ಏನಾದರೂ ಒಂದು ಆಧಾರ ಇಟ್ಟುಕೊಂಡು ಮುಂದುವರಿಸಬೇಕು ಈ ಮಾತನ್ನು ಕೇವಲ ನಾನು ಈ ರಾಜ್ಯಕ್ಕೆ ಸೀಮಿತವಾದುದ್ದೆಂದು ಹೇಳುತ್ತಾ ಇಲ್ಲ. ರಾಜ್ಯದ ರಾಜ ಕಾರಣಿಗಳು ಯಾರೇ ಇರಲಿ, ಎಲ್ಲಿಯೇ ಇರಲಿ, ಯಾವ ಸ್ಥಾನದಲ್ಲಿಯೇ ಇರಲಿ ಇಂತಹ ಆರೋಪಣೆ ಯನ್ನು ಮಾಡುವಾಗ ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಕೇವಲ ಅಧಿಕಾರ ಸ್ಥಾನದ ಭದ್ರತೆಗಾಗಿ ಮಾತನಾಡುವುದಾದರೆ ಅದಕ್ಕೆ ಸಾಕಷ್ಟು ಪ್ರತಿಭಟನೆಯನ್ನು ಸಮಾಜದ ಬೇರೆ ವರ್ಗದವರೂ ಕೂಡ ಮಾಡುವುದಕ್ಕೆ ಎದೆಗೊಟ್ಟಂತಾಗುತ್ತದೆ. ಶ್ರೀ ಮಾನ್ ಕಾಗೋಡು ತಿಮ್ಮಪ್ಪನವರು ಕಳೆದ ವಾರ ಈ ಬಗ್ಗೆ ಎರಡು ಗಂಟೆಗಳ ಕಾಲ ಮಾತನಾಡಿದರು. ಅವರ ಭಾಷಣವನ್ನು ನಾನು ಕೂಡ ಕೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ತಲೆ ಅಲ್ಲಾಡಿಸಿದರು. ಈವೊತ್ತು ನಾವು ಭಾಷಣ ಮಾಡುವಾಗಲು ಅವರು ಇರಬೇಕಾಗಿತ್ತು. ಅವರಿಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ಭಾಷಣ ಆಪ್ಯಾಯಮಾನ ವಾಗಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮಗೆ ಹೇಗೆ ಇತ್ತು

ಶ್ರೀ ಎಚ್. ಡಿ. ದೇವೇಗೌಡ.—ನನಗೂ ಚೆನ್ನಾಗಿತ್ತು. ನಾನೇ ತಮ್ಮನ್ನು ಮೊದಲು ಕಳಕಳಿಕೆ ಯಿಂದ ಕೇಳಿಕೊಂಡೆ. ನೀವು ಮೊದಲು ಮಾತನಾಡಿ, ಆ ಮೇಲೆ ನಾನು ಮಾತನಾಡುತ್ತೇನೆ ಎಂದು. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಭಾಷಣ ಮಾಡಿದಾಗ ಯಾರೀತಿ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇದ್ದರೋ ಅದೇರೀತಿ ಈವೊತ್ತು ಕೂಡ ಇರಬೇಕಾಗಿತ್ತು. ಎಂದು ನನ್ನ ಆಶೆ. ಈ ನಿರ್ಣಯವನ್ನು ತಂದಿರುವುದಕ್ಕೆ ಬಲವತ್ತರವಾದ ಕಾರಣಗಳು ಏನು ಎಂದು ತಾವು ಕೇಳುವುದಾದರೆ,

ನಾವು ಸ್ವಾತಂತ್ರ್ಯ ಗಳಿಸಿದಾಗ ಏನು ರಾಜ್ಯಾಂಗ ನಿರೂಪಣೆ ಮಾಡಿಕೊಂಡಿದ್ದೇವೆ. ಮತ್ತು ಅದರಲ್ಲಿ ಜಾತ್ಯಾತೀತ ರಾಷ್ಟ್ರವನ್ನು ಕಟ್ಟುತ್ತಿದೆ ಎಂದು ಹೇಳಿದ್ದೇವೆ ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಈವೊತ್ತಿನ ದಿವಸ ಸಿದ್ಧಾಂತಕ್ಕೆ ತಿಲಾಂಜಲಿ ಅರ್ಪಿಸುತ್ತಾ ಇದ್ದಾರೆ. ಈವೊತ್ತು ಜಾತಿಯ ಹೆಸರಿನಲ್ಲಿ ಜನಗಣತಿ ಆಗಬೇಕು ಎನ್ನುವ ಒಂದು ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಕಾರಣ ಶ್ರೀಮಾನ್ ಕೆ. ಎಚ್. ಹನುಮೇಗೌಡರು ಕಾರಣವಲ್ಲ ಕಳೆದ ೨೫ ವರ್ಷಗಳಲ್ಲಿ ರಾಷ್ಟ್ರದ ಆಡಳಿತವನ್ನು ನಡೆಸಿಕೊಂಡು ಬಂದಂಥ ಜನ ಕೆಲವು ವರ್ಗಗಳಿಗೆ ಅನ್ಯಾಯವನ್ನು ಎಸಗಿದ್ದಾರೆ, ಇದು ರಾಜ್ಯದ ಮಟ್ಟದಲ್ಲಿಯಾಗಲಿ, ರಾಷ್ಟ್ರದ ಮಟ್ಟದಲ್ಲಿಯಾಗಲಿ ಎಷ್ಟರ ಮಟ್ಟಿಗೆ ಅನ್ಯಾಯವಾಗಿದೆ ಎನ್ನತಕ್ಕಂಥಾದ್ದನ್ನು ತುಲನ ಮಾಡಬೇಕಾಗಿದ್ದರೆ ಈವೊತ್ತು ಯಾವ ಯಾವ ಜಾತಿ ಎಷ್ಟು ಇದೆ, ಯಾವ ಯಾವ ಪ್ರಮಾಣದಲ್ಲಿ ಅವರ ಏಳಿಗೆ ಆಗಿದೆ, ಅವರ ಏಳಿಗೆ ಮುನ್ನಡೆಯಾಗಿದೆಯೋ, ಹಿನ್ನಡೆಯಾಗಿದೆಯೋ ಇದರ ಬಗ್ಗೆ ಅವಲೋಕನ ಮಾಡಬೇಕಾದರೆ ಇದಕ್ಕೆ ಜನಗಣತಿ ಮಾಡಬೇಕಾಗಿದೆ. ಆದುದರಿಂದ ಈವೊತ್ತು ನಾನು ಈ ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈವೊತ್ತಿನ ದಿವಸ ತಾವು ಒಂದು ವಾತಾವರಣವನ್ನು ನಿರ್ಮಾಣ ಮಾಡಿದ್ದೀರಿ. ಏನೆಂದರೆ ೧೯೪೭ ರಿಂದ ಈಚೆಗೆ ದೇಶದಲ್ಲಿ ಒಂದು ದೊಡ್ಡ ಗುಲ್ಲು ಎದ್ದಿದೆ ಸಮಾಜದಲ್ಲಿರತಕ್ಕಂಥ ಹಿಂದುಳಿದ ವರ್ಗದವರ ಶೋಷಣೆ, ಅಲ್ಪಸಂಖ್ಯಾತರ ಶೋಷಣೆ, ನಿಮ್ನವರ್ಗದವರ ಶೋಷಣೆ ಈ ರಾಷ್ಟ್ರದಲ್ಲಿ ನಿಮ್ಮಿಂದ ಆಯಿತು ಎನ್ನುವುದರ ಬಗ್ಗೆ ಒಂದು ಬಲವತ್ತರವಾದ ಆರೋಪಣೆ ನಿಮ್ಮ ಮೇಲೆ ಇದೆ. ಈ ಒಂದು ವಾತಾವರಣವನ್ನು ರಾಷ್ಟ್ರದ ಮಹಾನಾಯಕರೇ ಮಾಡಿಸಿದರು. ಈ ಕೆಲಸವನ್ನು ಸಣ್ಣವರು ಮಾಡಿಲ್ಲ ದೊಡ್ಡ ನಾಯಕರುಗಳೇ ಈ ಒಂದು ವಾತಾವರಣವನ್ನು ನಿರ್ಮಾಣ ಮಾಡಿದರು.

ಶ್ರೀ ಕೆ. ಎಚ್. ರಂಗನಾಥ್.—ಯಾರಿಂದ ಆಗಿದೆ ?

ಶ್ರೀ ಎಚ್. ಡಿ. ದೇವೇಗೌಡ.—ಈ ಶೋಷಣೆ ಯಾರಿಂದ ಆಗಿದೆ, ಹೇಗೆ ಆಗಿದೆ, ಯಾವರೀತಿ ಆಗಿದೆ ಎನ್ನುವುದನ್ನು ವಿಚಾರ ಮಾಡುವ ಸಲುವಾಗಿಯೇ ಈ ಜನಗಣತಿ ಬೇಕು ಎಂದು ಹೇಳಿ, ಈ ಸಭೆಯ ಮುಂದೆ ಈ ನಿರ್ಣಯವನ್ನು ಮಂಡಿಸಿರುವುದು. ಶೋಷಣೆಯಾಗಿದ್ದರೆ, ಎಷ್ಟು ಪ್ರಮಾಣದಲ್ಲಿ ಆಗಿದೆ, ಯಾರಿಂದ ಆಗಿದೆ, ಇದನ್ನೆಲ್ಲಾ ನಾವು ವಿಚಾರ ಮಾಡಬೇಕಾಗುತ್ತದೆ. ಇದಕ್ಕೋಸ್ಕರ ನಾವು ಒಂದು ಸೂತ್ರವನ್ನು ಹಿಡಿಯಬೇಕಾಗುತ್ತದೆ. ಜನಗಣತಿಯನ್ನು ಮಾಡುವುದರ ಮುಖೇನ ಯಾವ ರಂಗದಲ್ಲಿ ಅನ್ಯಾಯವಾಗಿದೆ, ರಾಜಕೀಯ ರಂಗದಲ್ಲಿಯೋ ಸಾಮಾಜಿಕವಾಗಿಯೋ ಆರ್ಥಿಕವಾಗಿಯೋ ಎಂದು ನೋಡಬೇಕಾಗಿದೆ. ಈ ಒಂದು ವಾತಾವರಣ, ೧೯೪೭ ರಿಂದ ಈಚೆಗೆ ರಾಷ್ಟ್ರ ಮಟ್ಟದಲ್ಲಿಯೂ ನಿರ್ಮಾಣವಾಯಿತು. ಇದನ್ನು ಮಾಡಲಿಕ್ಕೆ ಕಾರಣ, ಅಧಿಕಾರ ಪೀಠದ ಭದ್ರತೆಗೆ ಎಂದು ನಾವು ಹೇಳಬೇಕಾಗುತ್ತದೆ ಆದಾದ ಮೇಲೆ ೧೯೬೧ ರಿಂದ ಈಚೆಗೆ ಪುಟ್ಟಣ್ಣಚೆಟ್ಟಿ ಟೌನ್ ಹಾಲ್‌ನಲ್ಲಿ, ರವೀಂದ್ರಕಲಾಕ್ಷೇತ್ರದಲ್ಲಿ ನಡೆದಂಥ ಜಾತಿಯ ಸಮ್ಮೇಳನಗಳು ಇದು ನಡೆಯಬಾರದು ಎಂದು ನಾನು ಹೇಳುವುದಿಲ್ಲ ಸಂಘಟನೆ ಮಾಡಲಿ. ಆದರೆ ಸಂಘಟನೆ ಮಾಡಿ ಅವರಿಗೆ ಆಗಿರತಕ್ಕ ಅನ್ಯಾಯಗಳನ್ನು ಅವರು ತೋಡಿಕೊಂಡಾಗ ಅದನ್ನು ಪರಿಶೀಲನೆ ಮಾಡುವುದಕ್ಕಾದರೂ ಒಂದು ಮಾರ್ಗ ಬೇಕು. ಎಷ್ಟು ಅನ್ಯಾಯವಾಗಿದೆ ಎನ್ನುವುದರ ಬಗ್ಗೆ ಯಾದರೂ ಜನಗಣತಿ ಬೇಕಾಗುತ್ತದೆ.

ಮತ್ತೊಂದು ದಕ್ಷಿಣ ವಲಯದ ಸಮ್ಮೇಳನ ಆಯಿತು ಇದಕ್ಕೆ ಪ್ರಧಾನ ಮಂತ್ರಿಗಳೂ ಬಂದರು. ಇದರ ಬಗ್ಗೆ ನಾನು ಪ್ರಧಾನ ಮಂತ್ರಿಗಳಿಗೆ ಪತ್ರವ್ಯವಹಾರ ಮಾಡಿದ್ದೇನೆ. ಅದು ಹಿಂದುಳಿದ ವರ್ಗದ, ಅಲ್ಪಸಂಖ್ಯಾತ ಪರಿಶಿಷ್ಟವರ್ಗದ ದಕ್ಷಿಣ ವಲಯದ ಸಮ್ಮೇಳನ. ಅದಕ್ಕೆ ರಾಜ್ಯದ ಮುಖ್ಯಮಂತ್ರಿಗಳ ತಮ್ಮಂದಿರೋ, ಅಣ್ಣಂದಿರೋ ಕನ್‌ವೀನರ್ ಆಗಿದ್ದರು. ಆಮೇಲೆ ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ನಿನ ಅಧ್ಯಕ್ಷರು ಅದಕ್ಕೆ ರೆಸೆಪ್ಷನ್ ಕಮಿಟಿಯ ಚೇರ್ಮನ್ ಆಗಿದ್ದರು ಎಂದು ಕಾಣುತ್ತದೆ. ಇದನ್ನೆಲ್ಲಾ ನಾನು ಹೇಳುವಾಗ ಆಧಾರ ಇಟ್ಟುಕೊಂಡು ಹೇಳುತ್ತೇನೆ. ಮಾನ್ಯ ಶಿವಪ್ಪನವರು ಕೇಳಬಹುದು, ಏನು ದೇವೇಗೌಡರು ಅವರ ಮೇಲೆ ಸೇಡು ಇಟ್ಟುಕೊಂಡು ಹೇಳುತ್ತಾರೆಯೋ ಎಂದು ನಾನು ತಿಳಿದುಕೊಂಡಿರುವ ರೀತ್ಯ, ಸಮ್ಮೇಳನಕ್ಕೆ ಬಹುಶಃ ಯಾವ ಯಾವ ಜಾತಿಯವರನ್ನು ಕರೆಯಬೇಕು ಎಂದು ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್‌ನಲ್ಲಿ ನಿರ್ಣಯ ಆಗಬೇಕು. ಇದನ್ನು ಜಾತಿಯ ಆಧಾರದ ಮೇಲೆ ಕರೆಯಬೇಕೇ, ಆರ್ಥಿಕವಾಗಿ ಹಿಂದುಳಿದಿರತಕ್ಕ ಆಧಾರದ ಮೇಲೆ ಕರೆಯಬೇಕೆ ಯಾವ ಒಂದು ಆಧಾರವನ್ನು ಇಟ್ಟುಕೊಂಡು ಕರೆದಿದ್ದಾರೆ ಎನ್ನುವುದು ಬೇಕು ಆರ್ಥಿಕವಾಗಿ ಹಿಂದುಳಿದಿದ್ದಾರೆ ಎನ್ನುವವರ ಆಧಾರ ಇಟ್ಟುಕೊಂಡು ಕರೆದಿದ್ದಾರೆಯೇ, ? ಈ ಕಾನ್‌ಫರೆನ್ಸ್‌ಗೆ ಪ್ರಧಾನ ಮಂತ್ರಿಗಳು ಬಂದಿದ್ದರು. ರಾಜ್ಯದ ಮುಖ್ಯ ಮಂತ್ರಿಗಳು ಭಾಷಣ ಮಾಡಿದ್ದಾರೆ. ಇದನ್ನು ಬೇರೆಯವರು ಮಾಡಿಕೊಂಡಿರುವುದು

(ಶ್ರೀ ಹೆಚ್. ಡಿ. ದೇವೇಗೌಡ)

ಇದು ಪಕ್ಷದ ವತಿಯಿಂದ ನಡೆದಿರತಕ್ಕಂಥ ಕಾನ್ಫರೆನ್ಸ್. ಇವತ್ತು ಆರ್ಥಿಕವಾಗಿ, ಹಿಂದುಳಿ ಎಲ್ಲಾ ಸೇರಿಸಿದ್ದಾರೆಯೇ ? ಏಕನಾಮಿಕಲಿ, ಸೋಷಿಯಲಿ ಇಂಥಿಂಥ ಜನಾಂಗದವರು ಬ್ಯಾಕ್‌ವರ್ಡ್ ಎನ್ನುವ ನಿರ್ಣಯಬೇಕು. ಇವತ್ತು ಆ ಸಭೆ ಅಲ್ಪಸಂಖ್ಯಾತರ ಹೆಸರಿನಲ್ಲಿ ನಡೆದಿದ್ದರೆ ಬಹುಶಃ ಬ್ರಾಹ್ಮಣರು, ಎಲ್ಲಾ ವರ್ಗದವರು ಬರುತ್ತಾರೆ ಅಲ್ಲಿ ಯಾರು ಏನೇನು ಭಾಷಣ ಮಾಡಿದ್ದಾರೆ ಎನ್ನುವುದನ್ನು ನಾನು ಕೋಟ್ ಮಾಡುತ್ತೇನೆ. ೧೯ ರಿಂದೀಚೆಗೆ ಎರಡು ಕೋಮುಗಳು ಎಲ್ಲಾ ಯೋಜನೆಗಳ ಫಲವನ್ನು ಅನುಭವಿಸಿಕೊಂಡು ಬಂದಿದ್ದಾರೆ, ಮತ್ತು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಎರಡು ಕೋಮುಗಳು ಶೋಷಣೆ ಮಾಡಿದೆ ಎನ್ನತಕ್ಕ ಅಪಾದನೆಯನ್ನು ಶ್ರೀಮಾನ್ ತಿಮ್ಮಪ್ಪನವರು ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ತಲೆಯನ್ನು ಅಲ್ಲಾಡಿಸುತ್ತಿದ್ದುದನ್ನು ನಾನು ನೋಡಿದೆ. ದಕ್ಷಿಣ ವಲಯದ ಸಮ್ಮೇಳನದಲ್ಲಿ ಬಹುಶಃ ಎರಡು ಕೋಮುಗಳನ್ನು ಬೇರ್ಪಡಿಸುವುದರ ಮುಖಾಂತರ ಮತ್ತೆಲ್ಲಾ ಕೋಮುಗಳನ್ನು ಸಂಘಟನೆ ಮಾಡತಕ್ಕಂಥ ಪೂರ್ವಭಾವಿಯಲ್ಲಿ, ಕರ್ನಾಟಕದಲ್ಲಿ ಇಂಥ ಒಂದು ಸಮ್ಮೇಳನ ಆಯಿತು ಎಂದು ನನ್ನ ಭಾವನೆ ಈ ಒಂದು ಅಭಿಪ್ರಾಯ ಬಂದಿದೆ ಎಂದರೆ ತಪ್ಪಾಗಲಿಕ್ಕಿಲ್ಲ ಅದಕ್ಕೆ ತಾವು ಉತ್ತರ ಕೊಡುವಾಗ ಏನು ಹೇಳುತ್ತೀರೋ ಹೇಳಿ ಇದೇ ಆಧಾರದ ಮೇಲೆ ನಾನು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಏಕನಾಮಿಕಲಿ. ಸೋಷಿಯಲಿ, ಬ್ಯಾಕ್‌ವರ್ಡ್ ಎಂದು ಹಿಂದುಳಿದ ವರ್ಗವನ್ನು ನಿರ್ಣಯ ಮಾಡುತ್ತೀರಾ ಅಥವಾ ಯಾವುದೇ ಜಾತಿಯ ಆಧಾರದ ಮೇಲೆ ಮಾಡುತ್ತೀರಾ ? ಸಮ್ಮೇಳನಕ್ಕೆ ಯಾವ ಯಾವ ಆಧಾರದಮೇಲೆ ಪ್ರತಿನಿಧಿಗಳನ್ನು ಕರೆಸಿದ್ದೀರಿ ? ಇಂಥ ಸಮ್ಮೇಳನವನ್ನು ಉದ್ಘಾಟನೆ ಮಾಡತಕ್ಕಂಥ ನಿರ್ಣಯ ಬಂದಾಗ ಪೂರ್ವಾಪರ ಯೋಜನೆಯನ್ನು ಮಾಡಬಾರದೆ ? ಇದರ ಬಗ್ಗೆ ಕೇಂದ್ರ ಸರ್ಕಾರದ ಧೋರಣೆ ಏನು ಎನ್ನತಕ್ಕಂಥಾದ್ದನ್ನು ಮೊದಲು ಆಲೋಚನೆ ಮಾಡಿ, ನಿರ್ಣಯಕ್ಕೆ ಬರಬೇಕು ಎಂದು ನಾನು ಪತ್ರ ಬರೆದಿದ್ದೇನೆ. ಅದಕ್ಕೆ ಅವರೂ ಉತ್ತರ ಕೊಟ್ಟಿದ್ದಾರೆ. ಅದನ್ನೆಲ್ಲಾ ನಾನು ಇಲ್ಲಿ ಓದಿ ಹೇಳಬೇಕಾಗಿಲ್ಲ. ಈ ಕೆಲವು ಘಟನೆಗಳಿಂದ, ಇಂಥ ಒಂದು ರೆಸಲ್ಯೂಷನ್ ಅನ್ನು ತರಬೇಕಾಗಿ ಬಂತು. ಪ್ರಪ್ರಥಮವಾಗಿ, ಶ್ರೀಮಾನ್ ತಿಮ್ಮಪ್ಪನವರು ನನಗೆ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ನ್ನು ನೇಮಕ ಮಾಡಿದ್ದು ತಮಗೆ ಸಹನೆ ಇಲ್ಲವೇ ಎನ್ನುವ ಮಾತನ್ನು ಹೇಳಿದರು. ಬ್ಯಾಕ್ ವರ್ಡ್ ಕ್ಲಾಸ್ ಕಮಿಷನ್ ಬಗ್ಗೆ ಒಂದು ದೊಡ್ಡ ಚರ್ಚೆಯೇ ಆಯಿತು. ನಾನೆ ಅದನ್ನು ಪ್ರಾರಂಭ ಮಾಡಿದೆ. ಬಹುಶಃ ಜಾತಿಯ ಹೆಸರಿನಲ್ಲಿ ಆಗುವ ಸಮ್ಮೇಳನಗಳ ಬಗ್ಗೆ ಧೈರ್ಯ ಮಾಡಿ ಮಾತನಾಡಿ ಐ ಎ ಎಸ್, ಐ ಪಿ ಎಸ್ ಕ್ಲಾಸ್-೧, ಕ್ಲಾ-೨ ಹುದ್ದೆಗಳಲ್ಲಿ ಯಾವ ಯಾವ ವರ್ಗದಲ್ಲಿ ಎಷ್ಟೆಷ್ಟು ಜನವಿದ್ದಾರೆ ಎಂದು ಸಭೆಯಲ್ಲಿ ಚರ್ಚೆಮಾಡಿದಾಗ, ಮೂರನೆಯ ದಿವಸ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ, ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್‌ನ್ನು ಅಪಾಯಿಂಟ್ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡಿದ್ದೇನೆ. ಇದಕ್ಕೂ ಮುಂದೆ, ನಾಗನಗೌಡ ಕಮಿಟಿಯವರು ಒಂದು ವರದಿಯನ್ನು ಕೊಟ್ಟಿದ್ದು ವರದಿಯಲ್ಲಿರತಕ್ಕ ಕೆಲವು ಶಿಫಾರಸ್‌ಗಳ ಬಗ್ಗೆ ಅಂತಿಮ ನಿರ್ಣಯ ತೆಗೆದು ಕೊಳ್ಳುವ ಬಗ್ಗೆ ಸರ್ಕಾರ ಹಿಂದಕ್ಕೆ ಹೇಗೆ ಹೋಯಿತೋ ಗೊತ್ತಿಲ್ಲ. ಹಿಂದಿನ ಸರ್ಕಾರಗಳು ಇದರ ಬಗ್ಗೆ ಗಮನಹರಿಸಲಿಲ್ಲ, ಎನ್ನುವ ಮಾತು ಏನು ಇದೆ, ಅದು ಸತ್ಯಕ್ಕೆ ದೂರವಾದ ಮಾತು. ನಾಗನಗೌಡ ಕಮಿಟಿಯವರು ಕೊಟ್ಟಂಥ ರಿಪೋರ್ಟ್ ಬಗ್ಗೆ ರಾಜ್ಯಾಂಗದಲ್ಲಿ ಕೆಲವು ಎರಡು ತೊಡರುಗಳು ಬಂದಿದ್ದರಿಂದ ರಾಷ್ಟ್ರದ ಉಚ್ಚನ್ಯಾಯಾಲಯಕ್ಕೆ ಅದು ಹೋಗಿ ಆ ರಿಪೋರ್ಟು ಕಾರ್ಯರೂಪಕ್ಕೆ ಬರುವುದು ಕಷ್ಟ ವಾಯಿತು. ಒಂದು ವೇಳೆ ಮಾನ್ಯ ಹಾವನೂರ್ ಅವರು ಕೊಟ್ಟ ರಿಪೋರ್ಟಿನಲ್ಲಿ ಏನರು ತೊಡರುಗಳು ಏನಾದರು ಇದ್ದರೆ, ರಾಜ್ಯಾಂಗವನ್ನು ತಿದ್ದುಪಡಿ ಮಾಡಲಿಕ್ಕೆ......

ಶ್ರೀ ಕೆ. ಎಚ್. ರಂಗನಾಥ್.—ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ನವರು ಆರ್ಥಿಕ ಪರಿಸ್ಥಿತಿ ಯನ್ನು ಆಧಾರವಾಗಿಟ್ಟುಕೊಂಡಿರುವರೇ ವಿನಹ ಜಾತಿಯನ್ನಲ್ಲ. Nagan Gowda Commitee report has not been accepted by the Government.

ಶ್ರೀ ಎಚ್. ಡಿ. ದೇವೇಗೌಡ.—ಮೆಡಿಕಲ್ ಕಾಲೇಜುಗಳಿಗೆ ತಾಂತ್ರಿ ಕಾಲೇಜುಗಳಿಗೆ, ಸೀಟುಗಳನ್ನು ಕೊಡತಕ್ಕ ಕಾಲದಲ್ಲಿ ಆ ಕಮಿಟಿಯವರ ಶಿಫಾರಸಿನ ಆಧಾರದ ಹಿನ್ನೆಲೆಯಲ್ಲಿ ನಿರ್ಣಯ ತೆಗೆದುಕೊಂಡಾಗ ಅದು ಕೋರ್ಟಿಗೆ ಹೋಗಿ ಸ್ಟ್ರಕ್ ಡೌನ್ ಆಗಿದೆ. ಕೆಲವು ನಿರ್ಣಯಗಳನ್ನು ಸರ್ಕಾರದವರು ತೆಗೆದು ಕೊಂಡರೂ ಸಹ ಅವುಗಳ ಬಗ್ಗೆ ರಾಜ್ಯದ ಉಚ್ಚನ್ಯಾಯಾಲಯ ಮತ್ತು ರಾಷ್ಟ್ರದ ಉಚ್ಚನ್ಯಾಯಾಲಯ ದವರು ತಮ್ಮ ತೀರ್ಪಿನಲ್ಲಿ ಜಾತಿಯ ಹೆಸರಿನಲ್ಲಿ ನಿರ್ಣಯತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿ ದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಇವತ್ತು ಸುಪ್ರೀಂ ಕೋರ್ಟಿನ ನಿರ್ಣಯ ಇದೆ, ನಾಯಕರು, ಗೊಲ್ಲರು, ತಿಗಳರು ಇದ್ದಾರೆ, ಇನ್ನೂ ನಾನಾ ಜಾತಿಗಳು ಇವೆ. Caste should also be taken into consideration ಎಂದು ನಿರ್ಣಯವಾಗಿದೆ

SRI H. D. DEVEGOWDA.—Cast with economic consideration, but not merely caste. ಅದಕ್ಕೆ ಅವಕಾಶ ಇಲ್ಲದಿದ್ದರೆ ತಿದ್ದುಪಡಿ ಬೇಕಾದರೂ ತರಬೇಕಾಗುತ್ತದೆ. ಕೇಂದ್ರ ಸರ್ಕಾರದವರ ನೀತಿ ಬಗ್ಗೆ ನಾನು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ನಿರ್ಣಯ ಏನು ಮಾಡಿದ್ದೀರಿ, ಯಾವ ಆಧಾರದ ಮೇಲೆ ಮಾಡಿದ್ದೀರಿ ಎಂದು ಕೇಳಿದರೆ ಉತ್ತರ ಹೇಳಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಈ ದಿವಸಗಳವರೆಗೆ ಅಂದರೆ ೧೯೪೭ ರಿಂದ ೧೯೭೪ ರವರೆಗೆ ಯಾವುದೇ ಜಾತಿಯ ಆಧಾರದ ಮೇಲೆ ಹಿಂದುಳಿದ ವರ್ಗ ಎಂದು ನಿರ್ಣಯ ಮಾಡುವುದಕ್ಕೆ ಕೇಂದ್ರ ಸರ್ಕಾರ ನಿರ್ಣಯ ಮಾಡಿಲ್ಲ. ಈ ದಿಸೆಯಲ್ಲಿ ನಿರ್ಣಯ ಮಾಡತಕ್ಕ ಬಗ್ಗೆ ತಮ್ಮ ಅಭಿಪ್ರಾಯ ಏನು ಎಂದು ಕೇಳಿದರೆ, ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ,

ಶ್ರೀ ಕೆ ಎಚ್. ರಂಗನಾಥ್.—ಜಸ್ಟೀಸ್ ಶ್ರೀ ಕೆ. ಎಸ್. ಹೆಗ್ಗಡೆಯವರ ತೀರ್ಪನ್ನು ನೋಡಿದರೆ ಅದರಲ್ಲಿ Cast should also be taken into consideration ಎಂದು ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಜಾತಿ ಮತ್ತು ಆರ್ಥಿಕ ಬೆಳವಣಿಗೆ ಎರಡನ್ನೂ ತೆಗೆದುಕೊಂಡು ನಿರ್ಣಯ ಮಾಡಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೇಂದ್ರ ಸರ್ಕಾರದಲ್ಲಿ ಕಾಂಗ್ರೆಸ್ ಒಡೆದು ಎರಡು ಆದಮೇಲೆ ಇವತ್ತಿನವರೆಗೂ ಜಾತಿ ಆಧಾರದ ಮೇಲೆ ಬ್ಯಾಕ್‌ವರ್ಡ್ ಅಂಡ್ ಫಾರ್‌ವರ್ಡ್ ಎಂದು ನಿರ್ಣಯ ಮಾಡಿಲ್ಲ, ಹಾಗೇನಾದರೂ ಮಾಡಿದ್ದರೆ ತಿಳಿಸಬೇಕು.

ಶ್ರೀ ಕೆ. ಎಚ್. ರಂಗನಾಥ್.—ನಿರ್ಣಯ ಮಾಡುವುದಕ್ಕೋಸ್ಕರವೇ ಈ ಕಮಿಷನ್ ನೇಮಕ ವಾಗಿರುವುದು. ಕರ್ನಾಟಕದ ಬಗ್ಗೆ ಹೇಳುವುದಾದರೆ ಸುಪ್ರೀಂ ಕೋರ್ಟಿನ ಲೇಟೆಸ್ಟ್ ಡಿಸಿಷನ್ ಆದ ಮೇಲೆ, ಈ ಸರ್ಕಾರ ಬಂದ ಮೇಲೆ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಯಾವ ಯಾವ ಜಾತಿಗಳು ಸೇರಿವೆ ಎಂದು ನಿರ್ಣಯ ಮಾಡುವುದಕ್ಕೋಸ್ಕರ ಈ ಕಮಿಷನ್ ನೇಮಕ ಆಗಿರುವುದು.

ಶ್ರೀ ಎಚ್. ಡಿ. ದೇವೇಗೌಡ.—ಕಮಿಷನ್ ನೇಮಕ ಮಾಡಿರುವ ಬಗ್ಗೆ ಪ್ರತಿಕ್ರಿಯೆ ವ್ಯಕ್ತ ಪಡಿಸುವುದಕ್ಕೆ ಸಮಯ ಇದೆ, ಅದರ ವರದಿ ಹೊರಗಡೆ ಬರಲಿ, ಕಮಿಷನ್‌ಗಳು ಎಷ್ಟೋ ಬಂದು ಹೋಗಿವೆ ಕೇಂದ್ರ ಸರ್ಕಾರದವರು ನೇಮಕ ಮಾಡಿದತಕ್ಕ ಕಾಕಾ ಕಾಲೇಲ್ಕರ್ ರವರು ತಮ್ಮ ರಿಪೋರ್ಟನ್ನು ೧೯೫೬ರಲ್ಲಿ ಕೊಟ್ಟರು

ಶ್ರೀ ಕಾಗೋಡು ತಿಮ್ಮಪ್ಪ.—ಕಮಿಷನ್ ವರದಿ ಬರಲಿ ನೋಡಿಕೊಳ್ಳೋಣ ಎಂದು ಈಗಲೇ ಸವಾಲು ಹಾಕುತ್ತಿದ್ದಾರೆ, ವರದಿ ಬಂದರೆ ಏನು ಮಾಡುತ್ತಾರೋ ?

ಶ್ರೀ ಎಚ್. ಡಿ. ದೇವೇಗೌಡ.—ಯಾವ ಆಧಾರದ ಮೇಲೆ ವರದಿ ಕೊಡುತ್ತಾರೋ ನೋಡೋಣ ಎಂದು ಹೇಳಿದೆ, ಅದರಲ್ಲಿಯೂ ರಾಜಕೀಯ ಮಾಡುವುದರಲ್ಲಿ ಅರ್ಥ ಇಲ್ಲ. ಯಾವ ಅಭಿಪ್ರಾಯದಲ್ಲಿ ಕೊಡುತ್ತಾರೋ, How can I presume things ? ಪ್ರಿಮೆಚೂರ್ ಸ್ಟೇಜಿನಲ್ಲಿ ಆಗ್ಯೂ ಮಾಡುವುದರಲ್ಲಿ ಅರ್ಥ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಜಾತಿ ಮತ್ತು ಆರ್ಥಿಕ ಪರಿಸ್ಥಿತಿ ಎರಡನ್ನೂ ಪರಿಗಣನೆಗೆ ತೆಗೆದು ಕೊಳ್ಳಬೇಕು. ಉದಾಹರಣೆಗೆ ನಾಯಿಂದ ಜಾತಿ ಇದೆ. ಅವನು ಲಕ್ಷಾಧಿಪತಿ ಇರಬಹುದು. ಇವತ್ತು ಬೀದಿಯಲ್ಲಿ ಕುಳಿತುಕೊಂಡು ಅವನನ್ನು ಹಜಾಮ ಎಂದರೆ ಅವನಿಗೆ ಎಷ್ಟು ಮನಸ್ಸಿಗೆ ವೇದನೆಯಾಗು ತ್ತದೆ ? ಅದನ್ನು ನೋಡಿಕೊಳ್ಳಬೇಕು. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಆರ್ಥಿಕ ಪರಿಸ್ಥಿತಿ ಯನ್ನು ಗಣನೆಗೆ ತೆಗೆದುಕೊಳ್ಳಬೇಕಾದದ್ದು ಇಲ್ಲ. ಜಾತಿಯು ಯಾವ ರೀತಿಯಾಗಿ ಸಾಮಾಜಿಕವಾಗಿ ಅವದಲ್ಲರತಕ್ಕ ಕ್ರಿಯಾಶಕ್ತಿಯನ್ನು ಕುಂದಿಸುತ್ತದೆ, ಅದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಕಾಂಗ್ರೆಸ್ ಅಧ್ಯಕ್ಷರು. ಪ್ರಧಾನ ಮಂತ್ರಿಗಳಿಗೆ ಹೇಳಿ.

† SRI K. H. RANGANATH.—With all due respect to my Hon'ble friend let us not drag in the name of the Prime Minister. There is no need. ಈ ರಾಜ್ಯದಲ್ಲಿ ಯಾರು ಯಾರು ಬ್ಯಾಕ್‌ವರ್ಡ್ ಕ್ಲಾಸ್ ಎನ್ನುವುದನ್ನು ನಿರ್ಣಯ ಮಾಡತಕ್ಕ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಈ ಸಭೆಗೆ ಇದೆ. ಪ್ರಧಾನಿಯವರನ್ನು ಕೆಣಕತಕ್ಕ ರೀತಿಯಲ್ಲಿ ಮಾತನಾಡುವಂಥದ್ದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸರಿಯಲ್ಲ. ನನಗೂ ಕೆಲ ಕೆಲವು ವೈಯಕ್ತಿಕ

(ಶ್ರೀ ಕೆ. ಹೆಚ್. ರಂಗನಾಥ್)

ಅಭಿಪ್ರಾಯಗಳಿವೆ. ಆದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಧೈರ್ಯ ಇದರೆ ಹೇಳಲಿ, ಅವರ ಓಟು ಬೇಡ, ನನ್ನ ಜಾತಿಯವರದ್ದೇ ಸಾಕು ಎಂದು ಅದೂ ಆಗಬಹುದು. ಪ್ರತಿನಿತ್ಯ ಪ್ರಧಾನಿಯವರನ್ನು ಕೆಣಕುವುದು, ಪ್ರತಿ ಹೆಜ್ಜೆಗೆ ಕೆಣಕುವುದು ಸರಿಯಲ್ಲ. ಅಧ್ಯಕ್ಷರೆ, ಈ ರಾಜ್ಯಾಂಗದ ಘಟನೆ ಪ್ರಕಾರ ರಾಷ್ಟ್ರಾಧ್ಯಕ್ಷರು ಇರುತ್ತಾರೆ. ಪ್ರಧಾನಿಯವರು ಇರುತ್ತಾರೆ, ಎಲ್ಲಿಯವರೆಗೆ ಅವರಿಗೆ ಗೌರವ ಕೊಡುವುದನ್ನು ನಾವು ಕಲಿಯುವುದಿಲ್ಲವೋ ಅಲ್ಲಿಯವರೆಗೆ ನಾವು ಸರಿಯಾದ ರೀತಿಯಲ್ಲಿ ನಡೆದಿಲ್ಲವೆಂದು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ — ಯಾರು ಯಾರಿಗೆ ಗೌರವ ಕೊಡಬೇಕು, ಹೇಗೆ ಗೌರವ ಕೊಡಬೇಕು ಎಂದು ಬಹುಶಃ ನನಗೆ ತಾವು ಉಪದೇಶ ಮಾಡುವ ಅವಶ್ಯಕತೆ ಇಲ್ಲ. ದೊಡ್ಡವರು ದೊಡ್ಡಸ್ತಿಕೆಯಿಂದ ನಡೆದರೆ ಎಲ್ಲರಿಂದಲೂ ಗೌರವಸಿಕ್ಕುತ್ತದೆ. ಆದರೆ ದೊಡ್ಡವರು ಚಿಲ್ಲರೆ ಕೆಲಸಕ್ಕೆ ಕೈ ಹಾಕಿದರೆ ಹೇಗೆ ಎಲ್ಲಿರಿಂದ ಗೌರವ ಸಿಕ್ಕುತ್ತದೆ ?

ಶ್ರೀ ಕೆ. ಹೆಚ್. ರಂಗನಾಥ.—ಅಧ್ಯಕ್ಷರನ್ನು ನಾನು ಕೇಳಿಕೊಂಡೆ, ಅದಕ್ಕೆ ಅವಕಾಶ ಕೊಡಬೇಡಿ ಎಂದು.

ಶ್ರೀ ಹೆಚ್. ಡಿ. ದೇವೇಗೌಡ.— ನಾನು ಮಾತನಾಡುವಾಗ ಇತಿ ಮಿತಿಗಳಿಗೆ ಒಳಪಟ್ಟು ಸಾಧ್ಯವಿದ್ದಷ್ಟೂ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇತಿಮಿತಿ ಬಿಟ್ಟು ಮುಂದೆ ಹೋದರೆ ನನ್ನನ್ನು ಪುಲ್‌ಅಪ್ ಮಾಡುವುದಕ್ಕೆ ಅಧ್ಯಕ್ಷರಿಗೆ ಅಧಿಕಾರ ಇದೆ ಮಾನ್ಯ ಮಂತ್ರಿಗಳು ಒಂದು ಮಾತನ್ನು ಕೇಳಿದರು ಅವರ ಓಟು ಬೇಕೋ ಬೇಡವೊ ಎಂದು. ಧೈರ್ಯ ಇದ್ದರೆ ಹೇಳಲಿ, ಇದೆಲ್ಲಾ ಓಟಿಗೋಸ್ಕರ ಎಂದು.

ಶ್ರೀ ಕೆ. ಹೆಚ್. ರಂಗನಾಥ.—ನೀವು ಕೆಣಕುವುದರಿಂದ ನಾವು ಕೆಣಕಬೇಕಾಗುತ್ತದೆ. ಸರಿಯಾಗಿ ಮಾತನಾಡಿದರೆ ಕೆಣಕುವ ಅವಶ್ಯಕತೆ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ — ಅಲ್ಲಿ ಈ ವಾತಾವರಣ ನಿರ್ಮಾಣ ಮಾಡುವುದಕ್ಕೆ ಕಾರಣ ಓಟಿಗೆ ಜನರನ್ನು ಮೇಲೆ ಎತ್ತುವ ಪ್ರಶ್ನೆ ಆಮೇಲೆ. ಮೊದಲು ಓಟು, ಓಟಿನ ಮುಖೇನ ಸ್ಥಾನ. ಅದಕ್ಕೋಸ್ಕರ ನಾಲ್ಕು ವರ್ಷಗಳ ದ್ವಂದ್ವ ಯುದ್ಧ ನಡೆದಿರುವುದು. ದೇವೇಗೌಡರನ್ನು ತೆಗೆಯಬೇಕಾದರೆ ಯಾವ ಅಸ್ತ್ರವನ್ನು ಪ್ರಯೋಗ ಮಾಡಬೇಕೋ ಅದು ಬಿಟ್ಟು, ಬೇರೆ ಕೆಲಸಕ್ಕೋಸ್ಕರ ಹೋರಾಟ ನಡೆಸುತ್ತೇವೆಂದು ಇಟ್ಟುಕೊಳ್ಳಬೇಕಾಗಿಲ್ಲ. ಒಂದು ಕಾರಣಕ್ಕೋಸ್ಕರ ವಾತಾವರಣ ನಿರ್ಮಾಣ ಮಾಡಿ, ಸಮಾಜದಲ್ಲಿ ದೊಡ್ಡ ಗಾಳಿ ಎಬ್ಬಿಸಿ ಬಿಡುತ್ತಾರೆ. ಯಾರೇ ಎಬ್ಬಿಸಿದರೂ ನಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ದೊಡ್ಡವರು ಸಮಾಜಕ್ಕೆ ಇರಬಹುದು, ರಾಷ್ಟ್ರಕ್ಕೆ ದೊಡ್ಡವರು ಇರಬಹುದು, ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡುವುದಕ್ಕೆ ಯಾರಿಂದಲೂ ಸಾಧ್ಯ ಇಲ್ಲವೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಮಾಡುತ್ತೇನೆ, ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಪ್ರಥಮವಾಗಿ ರಾಜ್ಯ ಮಟ್ಟದಲ್ಲಿ ನಡೆದಿರತಕ್ಕ ಆಗುಹೋಗುಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಿಂತ ಮುಂಚೆ ಇವತ್ತು ರಾಷ್ಟ್ರದಲ್ಲಿ ಏನು ಹೊಸ ಕೂಗನ್ನು ಎಬ್ಬಿಸುತ್ತಿದ್ದಾರೆ. ಸಮಾಜದಲ್ಲಿ ಇರತಕ್ಕ ದೀನ ದಲಿತ ವರ್ಗದವರಿಗೆ ಸಮಾಜದಲ್ಲಿ ಇರತಕ್ಕ ಅಲ್ಪಸಂಖ್ಯಾತರಿಗೆ ಸಮಾಜದಲ್ಲಿರತಕ್ಕ ಹಿಂದುಳಿದ ವರ್ಗದವರಿಗೆ ೧೯೭೭ರ ವರೆಗೆ ನಡೆದಂತಹ ಆಡಳಿತದಲ್ಲಿ ಏನು ದ್ರೋಹ ಆಗಿವೆ ಎಂದು ಹೇಳುತ್ತೇನೆ. ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆದಿರತಕ್ಕ ಕೆಲವು ಘಟನೆಗಳ ಬಗ್ಗೆ ಮತ್ತು ರಾಜ್ಯ ಮಟ್ಟದಲ್ಲಿ ನಡೆದಿರತಕ್ಕ ಕೆಲವು ಘಟನೆಗಳ ಬಗ್ಗೆ ವಿವರಣೆ ಕೊಡಬೇಕಾಗುತ್ತದೆ. ಇವತ್ತು ಜನಗಣತಿ ಜಾತಿಯ ಆಧಾರದ ಮೇಲೆ ಆಗಬೇಕು ಎಂದು ಹೇಳಬೇಕಾಗುತ್ತದೆ. ೧೯೪೭ ರಿಂದ ೧೯೭೭ರ ವರೆಗೆ ಎಷ್ಟರ ಮಟ್ಟಿಗೆ ರಾಜಕೀಯವಾಗಿ ಯಾವ ಯಾವ ಜಾತಿಗಳು ಬೆಳೆದಿವೆ ಎಂಬುದನ್ನು ಯೋಚನೆ ಮಾಡಬೇಕು. ಮಾನ್ಯ ರಂಗನಾಥರವರು ಹೇಳಿದಹಾಗೆ ಸಮಾಜದಲ್ಲಿ ಇವತ್ತು ಬಹಳವಾಗಿ ಉಪೇಕ್ಷಿಸಲ್ಪಟ್ಟ ಕೆಲವು ವರ್ಗಗಳಿಗೆ ಇಲ್ಲವೆಂದು ಹೇಳುವುದಿಲ್ಲ ಆದರೆ ಇವತ್ತು ಕೆಲವು ವರ್ಗಗಳು ರಾಜಕೀಯವಾಗಿ ಉಪೇಕ್ಷಿಸಲ್ಪಟ್ಟಿರುವುದಕ್ಕೆ ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಅವುಗಳ ಬೆಳವಣಿಗೆ ಕುಂದು ಆಗುವುದಕ್ಕೆ ನಾವೇ ಸೃಷ್ಟಿ ಮಾಡಿಕೊಂಡ ಕೆಲವು ಕಾರಣಗಳು ಎಂದು ಹೇಳಬೇಕಾಗಿದೆ. ಅದನ್ನು ಇಂದು ಪೋಸ್ಟ್‌ಮಾರ್ಟಂ ಮಾಡದೆ ಗತ್ಯಂತರ ಇಲ್ಲ. ಇವತ್ತು ರಾಜಕೀಯವಾಗಿ ಒಂದು ಮಾತನ್ನು ಹೇಳುತ್ತೇನೆ ಬಹುಶಃ ಅಲ್ಪಸಂಖ್ಯಾತರು ರಿಲಿಜಿಯಸ್ ಮೈನಾರಿಟೀಸ್ ಎಂದು ಹೇಳಿದರೆ, ಆ ರಿಲಿಜಿಯಸ್ ಮೈನಾರಿಟೀಸ್ ಯಾರು ? ಈ ರಾಷ್ಟ್ರದಲ್ಲಿ ರಿಲಿಜಿಯಸ್ ಮೈನಾರಿಟೀಸ್ ೧೯೭೭ರ ವರೆಗೆ ಇದ್ದಂತಹ ಆಡಳಿತದಲ್ಲಿ ಶೋಕ ಆಗಿದೆ ಎಂದು ಹೇಳುವುದಾದರೆ ಅದಕ್ಕೆ ಕಾರಣಗಳನ್ನು ಕೊಡಬೇಕಾಗಿದೆ. ರಾಷ್ಟ್ರದಲ್ಲಿ

ರಾಷ್ಟ್ರಾಧ್ಯಕ್ಷರ ಚುನಾವಣೆ ಮಾಡಿಕೊಂಡು ಬಂದಿದ್ದೇವೆ. ಡಾ|| ಜಕೀರ್ ಹುಸೇನ್‌ರವರು ಬಹುಸಂಖ್ಯಾ
ತರೇ ಅಥವಾ ಅಲ್ಪ ಸಂಖ್ಯಾತರೇ, ರಿಲಿಜಿಯಸ್ ಮೈನಾರಿಟೀಸ್ ಸೇರಿದವರೇ ಎಂದು ಹೇಳುತ್ತೇನೆ ?
ರಾಷ್ಟ್ರಾಧ್ಯಕ್ಷರನ್ನು ಚುನಾವಣೆ ಮಾಡುವ ಹಿಂದಿನ ಎಲ್ಲಾ ಘಟನೆಗಳನ್ನು ನೋಡಿದಾಗ ಅಲ್ಪಸಂಖ್ಯಾತರಿಗೇ
ರಾಷ್ಟ್ರದಲ್ಲಿ ಅಪಾಯವಾಗಿದೆ ಎನ್ನುವ ವಾದಕ್ಕೆ ಹುರುಳು ಇಲ್ಲದೇ ಇರಬಹುದು; ಕರ್ನಾಟಕಕ್ಕೆ ಬಂದಾಗ
ಇಲ್ಲಿ ಒಂದು ಜಾತಿಯ ಪ್ರಾಬಲ್ಯ ಇದೆ, ಎನ್ನುವ ವಾದವನ್ನು ಮಾನ್ಯ ತಿಮ್ಮಪ್ಪನವರು ಹೇಳಿದ್ದಾರೆ.
ಅದರ ಬಗ್ಗೆ ವಿವರಣೆಗಳನ್ನು ಕೊಡುತ್ತೇನೆ. ೧೯೭೪ರ ವರೆಗೆ ಕೇಂದ್ರ ಮಟ್ಟದಲ್ಲಿ ನಡೆದಂಥ ಆಡಳಿತದಲ್ಲಿ
ಬಹುಶಃ ಯಾವುದೇ ರಿಲಿಜಿಯಸ್ ಮೈನಾರಿಟೀಸ್‌ಗೆ ಧೋಕ ಆಗಿದ್ದರೆ ಅದರ ಹೊಣೆಗಾರಿಕೆಯನ್ನು ಯಾರು
ಹೊರಬೇಕಾಗುತ್ತದೆ ?

೧೧-೩೦ ಎ. ಎಮ್.

ರಾಜ್ಯಮಟ್ಟದಲ್ಲಿ ಮಾನ್ಯ ಸಿದ್ಧವೀರಪ್ಪನವರು ಹೊರಬೇಕೋ, ಮಾನ್ಯ ಜತ್ತಿಯವರು ಹೊರಬೇಕೋ
ಮಾನ್ಯ ನಿಜಲಿಂಗಪ್ಪನವರು ಹೊರಬೇಕೋ, ಮಾನ್ಯ ಹನುಮಂತಯ್ಯನವರು ಹೊರಬೇಕೋ ಎಂಬುದು
ಗೊತ್ತಿಲ್ಲ. ಆದರೆ ರಾಷ್ಟ್ರ ಮಟ್ಟದಲ್ಲಿ ಅಲ್ಪ ಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ, ನಿಮ್ಮ ವರ್ಗದ
ವರಿಗೆ, ಮತ್ತೆ ಯಾವುದೇ ವರ್ಗ ಇರಲಿ, 'ಏನಾದರೂ ಧೋಕ ಆಗಿದ್ದರೆ, ಅದಕ್ಕೆ ಯಾರು ಹೊಣೆ
ಗಾರರು ? ಇಂದಿನ ಪ್ರಧಾನಮಂತ್ರಿಗಳು ಕಾರಣರೇ ಅಥವಾ ಅವರ ಪೂರ್ವಿಕರು ಕಾರಣರೇ ಎಂಬುದನ್ನು
ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಈ ರಾಷ್ಟ್ರದಲ್ಲಿ ೧೯೪೭ರಿಂದ ೧೯೭೪ರ ವರೆಗೆ ಯಾವುದೇ ಬಹು
ಸಂಖ್ಯಾತ ಕೋಮಿನವರು ನಾಯಕರಾಗಿಲ್ಲ, ಇವೊತ್ತು ರಾಷ್ಟ್ರಮಟ್ಟದಲ್ಲಿ ಬಹುಸಂಖ್ಯಾತ ಕೋಮು
ಎಂದರೆ ಷೆಡ್ಯೂಲ್ಡ್ ಕಾಸ್ಟ್ ಎಂದು ಹೇಳಬೇಕಾಗುತ್ತದೆ. ಈ ಜಾತಿಯವರು ಯಾರೂ ಇಲ್ಲಿಯವರೆಗೆ
ಪ್ರಧಾನಮಂತ್ರಿಗಳಾಗಿಲ್ಲ, ರಾಷ್ಟ್ರಾಧ್ಯಕ್ಷರಾಗಿಲ್ಲ, ಈ ಎಲ್ಲ ಸ್ಥಾನಗಳಲ್ಲಿದ್ದವರು ಅಲ್ಪ ಸಂಖ್ಯಾತರೋ
೧೯೪೭ ರಿಂದ ೧೯೭೪ರ ವರೆಗೆ ಅಲ್ಪಸಂಖ್ಯಾತರಿಗೆ ದ್ರೋಹವಾಗಿದೆ ಎಂದರೆ ಅದು ತಪ್ಪಾಗಲಾರದು.
ಇದು ಕೇವಲ ರಾಜಕೀಯ ಚುನಾವಣೆಯ ಆಪುಟ ಎಂದು ಹೇಳಬೇಕಾಗುತ್ತದೆ. ಇಲ್ಲಿಯವರೆಗೆ ಅಧಿಕಾರಕ್ಕೆ
ಬಂದಂಥವರ ಪೈಕಿ ಯಾರು ಯಾರು ಈ ಅಲ್ಪಸಂಖ್ಯಾತರ ಏಳಿಗೆಗಾಗಿ ದುಡಿದಿದ್ದಾರೆಂದು ಕೇಳಬೇಕಾಗು
ತ್ತದೆ. ಇದನ್ನು ದೇಶದ ಜನತೆಯ ಮುಂದೆ ಹೇಳಬೇಕಾಗುತ್ತದೆ. ಎಲ್ಲ ಕಾಲದಲ್ಲಿಯೂ ಜನತೆಯನ್ನು
ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ, ಈಗಿನ ಮೋಸದ ಮಾತುಗಳಿಂದ, ಮತ್ತು ಆ ಒಂದು ಜಾಲದಿಂದ
ಜನರು ಕೆಲವು ಕಾಲ ಮರುಳಾಗಬಹುದು, ಆದರೆ ಬಹಳ ಕಾಲದವರೆಗೆ ಇದು ನಡೆಯುವುದಿಲ್ಲ. ೧೯೪೭
ರಿಂದ ೧೯೭೪ರ ವರೆಗೆ ಅಧಿಕಾರಕ್ಕೆ ಬಂದಂಥ ರಾಷ್ಟ್ರಾಧ್ಯಕ್ಷರು, ಪ್ರಧಾನಮಂತ್ರಿಗಳು, ಮತ್ತು ಕೇಂದ್ರದ
ಇತರೇ ಮಂತ್ರಿಗಳ ಪೈಕಿ ಯಾವ ಯಾವ ಜಾತಿಯವರು ಎಷ್ಟೆಷ್ಟು ಜನರು ಇದ್ದರು ಎಂಬುದನ್ನು
ನೋಡಬೇಕಾಗಿದೆ. ಮತ್ತು ಇದೇ ಅವಧಿಯಲ್ಲಿ ಗವರ್ನರ್, ಅಂಬಾಸಿಡರ್, ಹೈಕಮಿಷನರ್ ಪೋಸ್ಟ್
ಗಳಿಗೆ ನೇಮಕವಾದಂಥವರ ಪೈಕಿ ಯಾವ ಯಾವ ಜಾತಿಯವರು ಇದ್ದರು ಮತ್ತು ಯಾವ ಯಾವ
ಹಿಂದುಳಿದ ಜಾತಿಯವರನ್ನು ಈ ಜಾಗಗಳಿಗೆ ನೇಮಕ ಮಾಡುವುದರ ಮೂಲಕ ರಾಜಕೀಯವಾಗಿ ಮೇಲಕ್ಕೆ
ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂಬುದನ್ನು ಸಹ ಪ್ರಶ್ನೆ ಮಾಡಬೇಕಾಗುತ್ತದೆ. ಈ ಮಾತನ್ನು
ಹೇಳುವಾಗ ನಾನು ಯಾವುದೇ ಒಂದು ಜಾತಿಯನ್ನು ಕುರಿತು ಮಾತನಾಡುತ್ತಿಲ್ಲ. ನನ್ನ ರಾಜಕೀಯ
ಜೀವನ ಪ್ರಾರಂಭವಾಗಿದ್ದು ೧೯೪೭ರಲ್ಲಿ. ಆಗ ನಾನು ಒಬ್ಬ ಯುವಕ ಕಾರ್ಯಕರ್ತನಾಗಿ ಶ್ರೀಮಾನ್ ಎ.
ಜಿ. ರಾಮಚಂದ್ರರಾಯರ ಹಿಂದೆ ಬೆಳೆದು ಬಂದೆ. ಮುಂದೆ ಶ್ರೀಮಾನ್ ನಿಜಲಿಂಗಪ್ಪನವರಿಗೂ ಮತ್ತು
ರಾಮಚಂದ್ರರಾಯರಿಗೂ ವೈಮನಸ್ಯ ಬಂದಿದ್ದರಿಂದ ಮತ್ತು ನಾನು ಎ. ಜಿ. ಆರ್. ರವರ ಹಿಂಬದಿಯಲ್ಲಿ
ಬೆಳೆದು ಬಂದಿದ್ದೇನೆ ಎಂಬ ಕಾರಣದಿಂದ ೧೯೬೯ರಲ್ಲಿ ಕಾಂಗ್ರೆಸ್ ನಿಂದ ಹೊರಗೆ ಹೋಗಬೇಕಾಗಿ ಬಂತು.
ರಾಷ್ಟ್ರಮಟ್ಟದಲ್ಲಿ ಅಧಿಕಾರಕ್ಕೆ ಬಂದಂಥ ನಾಯಕರುಗಳು ಜಾತಿಯ ಹೆಸರು ಹೇಳಿಕೊಂಡು ಜನರನ್ನು
ಶೋಷಣೆ ಮಾಡುತ್ತಿದ್ದಾರೆ. ಶೇಕಡ ಎರಡರಷ್ಟು ಇರುವ ಈ ಜನರು ಎಲ್ಲ ವರ್ಗದ ಜನರನ್ನು
ಒಡೆದು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ನೋವಿನಿಂದ
ಹೇಳಬೇಕಾಗುತ್ತದೆ. ಈ ರೀತಿಯ ಭಾವನೆಯನ್ನು ನಾನು ನನ್ನ ಜೀವನದಲ್ಲಿ ಬೆಳೆಸಿಕೊಂಡು ಬಂದಿಲ್ಲ.
ಕೇವಲ ಪಟ್ಟ ಮತ್ತು ಸ್ಥಾನ ಈ ಎರಡಕ್ಕಾಗಿ ಸಮಾಜದಲ್ಲಿರತಕ್ಕಂಥ ಜನತೆಯನ್ನು ಛಿದ್ರಗೊಳಿಸತಕ್ಕಂಥ
ರಾಜಕೀಯ ನೀತಿ ಏನಿದೆ, ಇದರಿಂದ ಯಾವ ಸಮಸ್ಯೆಗಳು ಕೂಡ ಬಗೆಹರಿಯುವುದಿಲ್ಲ. ಆದರೂ ಸಹ
ರಾಷ್ಟ್ರದ ನಾಯಕರಲ್ಲಿ ಈ ಒಂದು ಭಾವನೆ ಬೆಳೆದು ಬಂದಿರುವುದನ್ನು ನೋಡಿದಾಗ ನನ್ನ ಮನಸ್ಸಿಗೆ ನೋವು
ಮತ್ತು ಖೇದ ಎರಡೂ ಸಹ ಆಗುತ್ತದೆ. ಈ ಒಂದು ಪರಿಸ್ಥಿತಿ, ಈ ಒಂದು ವಾತಾವರಣ ಬೆಳೆದುಬರ
ಬಾರದಾಗಿತ್ತು. ರಾಜಕೀಯವಾಗಿ ಇಂದು ಯಾವ ಯಾವ ಜಾತಿಗಳು ಎಷ್ಟೆಷ್ಟು ಮೇಲಕ್ಕೆ ಬಂದಿವೆ ಎಂಬ
ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ನಂತರ ರಾಜ್ಯದ ಮಟ್ಟಕ್ಕೆ ಬರುತ್ತೇನೆ.

ಶ್ರೀ ಎನ್. ರಾಚಯ್ಯ.—೧೯೪೭ನೇ ಇಸವಿಯಿಂದಲೂ ಕೂಡ ಬ್ರಾಹ್ಮಣರು ಯಾರೂ ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿರಲಿಲ್ಲ. ಆಗಿದ್ದವರೆಲ್ಲಾ ಬ್ರಾಹ್ಮಣೇತರರು. ಆದಕಾರಣ-ಇಲ್ಲಿಯವರೆಗೆ ಯಾರೂ ಯಾರು ಮುಖ್ಯಮಂತ್ರಿಗಳಾಗಿದ್ದರು ಅವರೆಲ್ಲ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ನಡೆದು ಕೊಂಡಿದ್ದಾರೆಯೇ ಮತ್ತು ಅದನ್ನು ಅಕ್ಷರಶಃ ಜಾರಿಗೆ ಕೊಟ್ಟಿದ್ದಾರೆಯೇ ಎಂಬುದೇ ಮುಖ್ಯವಾದ ಪ್ರಶ್ನೆ. ರಾಜ್ಯಾಂಗದ ಪ್ರಕಾರ ಅವರೆಲ್ಲಾ ನಡೆದುಕೊಂಡಿದ್ದಾರೆ ಈ ಒಂದು ಆಕ್ಷೇಪಣೆಯನ್ನು ಯಾರೂ ಮಾಡುತ್ತಿ ರಲಿಲ್ಲ ಮತ್ತು ಈ ಒಂದು ನಿರ್ಣಯದ ಅಗತ್ಯವೂ ಇರಲಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನಿನ್ನೂ ರಾಜ್ಯದ ಮಟ್ಟಕ್ಕೆ ಬಂದಿಲ್ಲ, ಒಕ್ಕಲಿಗರು, ಲಿಂಗಾಯಿತರು ಆಡಳಿತ ನಡೆಸುತ್ತಿದ್ದಾಗ ಏನಾದರು ಅನ್ಯಾಯವಾಗಿದ್ದರೆ ಅದನ್ನು ಒಪ್ಪಿಕೊಳ್ಳಬೇಕಾಗುತ ದೆ. ಈಗ ನಾನು ರಾಷ್ಟ್ರ ಮಟ್ಟದ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎನ್. ರಾಚಯ್ಯ.—ನಾವು ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಂಡು ಚರ್ಚೆ ಮಾಡೋಣ. ಈಗ ನಮ್ಮ ಮುಂದಿರುವ ವಿಷಯವೆಂದರೆ, ರಾಜ್ಯದಲ್ಲಿ ಕೋಮುವಾರು ಜನಗಣತಿಯನ್ನು ನಡೆಸಬೇಕು ಎಂಬ ಬಗ್ಗೆ. ಏತಕ್ಕೆ ನಡೆಸಬೇಕು ಎಂಬ ಬಗ್ಗೆ ಕಾರಣವನ್ನು ಅದರಲ್ಲಿ ಕೊಡಲಾಗಿದೆ. ಇಂದು ಕೆಲವು ಜಾತಿಗಳು ಬಹಳ ಹಿಂದುಳಿದಿರುವುದಕ್ಕೆ ಕಾರಣರು ಯಾರು ಎಂದು ಹೇಳಿದರೆ ಅವರನ್ನು ಆಕ್ಷೇಪಣೆ ಮಾಡ ಬಹುದು. ಮುಖ್ಯವಾಗಿ ರಾಜ್ಯಾಂಗದಲ್ಲಿ ಹೇಳಿರತಕ್ಕಂಥ ಸೌಲಭ್ಯಗಳನ್ನು ಇಲ್ಲಿಯವರೆಗೆ ಆಡಳಿತ ನಡಸಿ ದವರು ಹಿಂದುಳಿದ ಜನಾಂಗದವರಿಗೆ ಒದಗಿಸಿಕೊಟ್ಟಿದ್ದರೆ ಈ ಒಂದು ಆಕ್ಷೇಪಣೆಯೇ ಇರುತ್ತಿರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದ ವತಿಯಿಂದ ಆ ಮಾತನ್ನು ತಾವು ಹೇಳಿದರೆ ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ನಮಗೆ ಸ್ವಾತಂತ್ರ್ಯ ಬಂದಮೇಲೆ ಇಲ್ಲಿಯವರೆಗೆ ಎರಡು ಕೋಮಿನವರೇ ಯಾವ ರೀತಿ ಅಧಿಕಾರ ನಡೆಸಿಕೊಂಡು ಬಂದಿದ್ದಾರೆ ಎಂಬುದನ್ನು ಹೇಳಿದ್ದಾರೆ. ಆ ಬಗ್ಗೆ ತಾವು ಉತ್ತರ ಕೊಡಬೇಕಾಗುತ್ತದೆ. ಮತ್ತು ಆ ಬಗ್ಗೆ ಸರ್ಕಾರದ ಧೋರಣೆ ಏನಿದೆ ಎಂಬುದನ್ನು ಹೇಳಬೇಕಾಗುತ್ತದೆ, ನಾನು ಬೇಡ ಎಂದು ಹೇಳುವುದಿಲ್ಲ. ನಾನು ರಾಜಕೀಯವಾಗಿ ರಾಷ್ಟ್ರಮಟ್ಟದಲ್ಲಿ ನಡೆದಿರುವ ಘಟನೆಗಳನ್ನು ಹೇಳಿದ್ದೇನೆ ಇನ್ನು ಆರ್ಥಿಕವಾಗಿ, ಸಾಮಾಜಿ ಕವಾಗಿ ಕೆಲವು ವರ್ಗಗಳು ಮುಂದುವರೆಯುವುದಕ್ಕೆ ಕಾರಣವೇನು ಎಂಬುದನ್ನು ನೋಡಬೇಕಾಗಿದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದಪ್ರಕಾರ ಕೆಲವು ರಾಜಕೀಯ ಸ್ಥಾನಮಾನಗಳನ್ನು ಹಿಂದುಳಿದ ಜನಾಂಗದವರ ಪೈಕಿ ಕೆಲವರಿಗೆ ಕೊಟ್ಟ ಮಾತ್ರಕ್ಕೆ, ಆ ಜನಾಂಗವೇ ಮುಂದೆಬರುತ್ತದೆ ಎಂದು ಹೇಳುವುದು ಸರಿಯಲ್ಲ, ಈಗ ಲಿಂಗಾಯಿತರೇ ಆಗಲೀ, ಒಕ್ಕಲಿಗರೇ ಆಗಲಿ, ಯಾರಾದರು ಅಧಿಕಾರಕ್ಕೆ ಬಂದರೆ, ಅವರಿಗೆ ಅವರ ಸಂಬಂಧೀಕರಿಗೆ ಮತ್ತು ಅವರ ಹಿಂಬದಿಯಲ್ಲಿರುವವರಿಗೆ ಅನುಕೂಲವಾಗುತ್ತದೆ ಹೊರತು ಇಡೀ ಅವರ ಸಮಾಜಕ್ಕೆ ಅನುಕೂಲವಾಗುತ್ತದೆ ಎಂದು ಯಾರಾದರು ತಿಳಿದುಕೊಂಡಿದ್ದರೆ ಅದು ಊಹೆಗೂ ಸಹ ನಿಲುಕದ ಮಾತಾಗುತ್ತದೆ ಎಂದು ಹೇಳಬೇಕಾಗುತ್ತದೆ. ಈ ಕಾರಣದಿಂದಲೇ ಜನಗಣತಿ ಯನ್ನು ನಡೆಸಬೇಕೆಂದು ನಿರ್ಣಯವನ್ನು ತಂದಿರುವುದು. ಮಾನ್ಯ ರಂಗನಾಥ ಅವರು ಉದಾಹರಣೆ ಒಂದನ್ನು ಕೊಡುತ್ತಾ ಒಬ್ಬ ನಾಯಿಂದ ಒಂದು ಲಕ್ಷ ರೂಪಾಯಿ ಶ್ರೀಮಂತನಾಗಿದ್ದರೂ ಸಹ ಆತನನ್ನು ಹಜಾಮ ಎಂದೇ ಕರೆಯುತ್ತಾರೆ ಎಂದು ಹೇಳಿದರು. ಮುಖ್ಯವಾಗಿ ಆರ್ಥಿಕವಾಗಿ ಮತ್ತು ಸಾಮಾಜಿಕ ವಾಗಿ ಸಮಾಜದಲ್ಲಿರತಕ್ಕಂಥ ಪ್ರತಿಯೊಬ್ಬರೂ ಸಹ ಮುಂದುವರೆಯುವುದಕ್ಕೆ ಕಳೆದ ೨೫ ವರ್ಷಗಳಿಂದ ನಾವು ಎಷ್ಟರಮಟ್ಟಿಗೆ ಕೆಲಸವನ್ನು ನಿರ್ವಹಣೆ ಮಾಡಿದ್ದೇವೆ ಎಂಬುದೇ ಮುಖ್ಯವಾದಪ್ರಶ್ನೆ. ಈ ಒಂದು ಪ್ರಶ್ನೆಗೆ ನಾವು ಉತ್ತರವನ್ನು ಪಡೆದುಕೊಳ್ಳಬೇಕಾಗುತ್ತದೆ. ಈ ಪ್ರಶ್ನೆಗೆ ಉತ್ತರ ಪಡೆದುಕೊಳ್ಳಲು ನಾವು ನಮ್ಮ ಹೃದಯವನ್ನು ಇವೊತ್ತು ಪರೀಕ್ಷೆಗೆ ಗುರಿ ಮಾಡಬೇಕಾಗುತ್ತದೆ. ಈ ಬಗ್ಗೆ ಕೆಲವು ನಿದರ್ಶನ ಗಳನ್ನು ಕೊಟ್ಟರೆ ಬಹುಶಃ ಅದು ಸಾಕಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ನಾವು ನಾಲ್ಕು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ ೫ನೇ ಪಂಚವಾರ್ಷಿಕ ಯೋಜನೆಗೆ ಕಾಲಿಟ್ಟಿದ್ದೇನೆ. ಕೆಲವು ಜಾತಿಗಳು ಇಂದು ತೀರಾ ಹಿಂದುಳಿದಿವೆ, ಅವುಗಳ ರಕ್ಷಣೆಗಾಗಿಯೇ ನಾವು ಜನ್ಮ ತೊಟ್ಟಿದ್ದೇವೆ ಎಂಬುದಾಗಿ ಇಂದು ರಾಷ್ಟ್ರದ ನಾಯಕರು ಹೇಳುತ್ತಿದ್ದಾರೆ. ಇದೇ ಮಾತನ್ನು ನಾನು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪವರು ಸಹ ಹೇಳಬಹುದು, ಆದರೆ ಕೇವಲ ಮಾತಿನಿಂದ ಏನೂ ಕೆಲಸವಾಗುವುದಿಲ್ಲ. ಈ ಒಂದು ಹಿನ್ನೆಲೆಯಲ್ಲಿ ನಾನು ಇಂದು ಮಾತನಾಡಬೇಕಾಗಿದೆ. ಮಾನ್ಯ ಬಸವಲಿಂಗಪ್ಪನವರು ಸಹ ಇಂದು ಸಭೆ ಯಲ್ಲಿ ಕುಳಿತಿದ್ದಾರೆ. ಸರ್ಕಾರದವರು ಜನತಾ ಹೌಸಿಂಗ್ ಸ್ಕೀಮನ್ನು ಜಾರಿಗೆ ತಂದು ಅದನ್ನು ನಿರ್ವಹಣೆ ಮಾಡಬೇಕೆಂದು ಪ್ರಯತ್ನ ಮಾಡಿದ್ದಾರೆ.

ಈ ವಿಷಯವನ್ನು ನಾನು ಪೂರ್ವಭಾವಿಯಾಗಿ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಇದಕ್ಕೆ ಕೊಡುವ ಹಣಕ್ಕೆ ಕತ್ತರಿ ಹಾಕಿದ್ದಾರೆ. ಹೌಸಿಂಗ್ ಸೈಟುಗಳಿಗೆ ಧನ ಸಹಾಯ ಏನು ಕೊಡುತ್ತೇವೆ

ಎಂದು ಹೇಳಿದ್ದರು ಅದಕ್ಕೆ ಕತ್ತರಿ ಹಾಕಿದ್ದಾರೆ. ಹೋದ ವರ್ಷ ಸ್ವಲ್ಪ ಕೊಟ್ಟಿದ್ದಾರೆ. ರಾಜ್ಯ ಸರ್ಕಾರದವರು ಯಾವುದೇ ಒಂದು ಮಹತ್ತರವಾದ ಆಶೆಯನ್ನು ಇಟ್ಟುಕೊಂಡು ಸಮಾಜದಲ್ಲಿರತಕ್ಕ ಕೆಳವರ್ಗದ ಜನಗಳಿಗೆ ಮೇಲಕ್ಕೆ ಎತ್ತುವುದಕ್ಕೆ ರೂಪರೇಷೆಗಳನ್ನು ಕೊಡತಕ್ಕ ಯೋಜನೆಗಳನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರು ಸಹ ಅದನ್ನು ಅಂತಿಮವಾಗಿ ನಿರ್ಣಯ ಮಾಡತಕ್ಕವರು ಪ್ಲಾನಿಂಗ್ ಕಮಿಷನ್‌ನವರು ಮತ್ತು ಕೇಂದ್ರ ಸರ್ಕಾರದವರು ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಸರಿಯಿಲ್ಲ ಎಂದರೆ ನಾನು ಅದನ್ನು ತಿದ್ದಿಕೊಳ್ಳುತ್ತೇನೆ.

ಒಂದು ಹಿನ್ನೆಲೆಯಲ್ಲಿ ೧೯೫೦ನೇ ಇಸವಿಯಿಂದ ಇಲ್ಲಿಯವರೆಗೆ ಖರ್ಚು ಮಾಡಿರತಕ್ಕ ಹಣದ ವಿಷಯದಲ್ಲಿ ಕಮಿಟಿ ಆನ್ ವೆಲ್‌ಫೇರ್ ಆಫ್ ದಿ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ ಟ್ರೈಬ್ಸ್ ಅವರು ಮಿನಿಸ್ಟ್ರಿ ಆಫ್ ಹೋಮ್ ಅಫೈರ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಹಿಂದುಳಿದ ವರ್ಗದವರಿಗೆ ಮತ್ತು ಹರಿಜನ ಗಿರಿಜನರಿಗೆ ಪ್ರಾಧಾನ್ಯತೆಯನ್ನು ಕೊಡಬೇಕು ಇಲ್ಲದಿದ್ದರೆ ಅವರ ರಕ್ಷಣೆಯನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಅದರ ರಕ್ಷಣೆಯಾಗಬೇಕಾದರೆ ಇವೊತ್ತಿನ ದಿವಸ ಪ್ಲಾನಿಂಗ್ ಕಮಿಷನ್‌ನಲ್ಲಿ ಅವರ ಪ್ರತಿನಿಧಿ ಯಾರೂ ಇಲ್ಲದಿದ್ದರೆ ಅದು ಸಾಧ್ಯವಿಲ್ಲವೆನ್ನತಕ್ಕ ಮಾತನ್ನು ಲೋಕಸಭೆಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ ಟ್ರೈಬ್ಸ್‌ಗೆ ಸಂಬಂಧಪಟ್ಟ ಉಪಸಮಿತಿಯವರು ಹೇಳಿದ್ದಾರೆ. ಈಗ ನಮ್ಮ ಕರ್ನಾಟಕದಲ್ಲಿ ಮುಖ್ಯ ಮಂತ್ರಿಗಳು ಹರಿಜನರೇ ಆಗಲೀ ನಾವು ಬೇಡ ಎಂದು ಹೇಳುವುದಿಲ್ಲ. ಆದರೂ ಕೂಡ ಈ ಒಂದು ಸಮಸ್ಯೆಗೆ ಅನುಗುಣವಾಗಿ ಅವರನ್ನು ಮೇಲಕ್ಕೆ ಎತ್ತುವುದಕ್ಕೆ ಸಂಬಂಧಪಟ್ಟ ಹಾಗೆ ಪ್ಲಾನ್ ಅಲೋಕೇಷನ್ ಇಡದೇ ಹೋದರೆ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಒಬ್ಬಿಬ್ಬರಿಗೆ ನೌಕರಿ ಕೊಡಬಹುದು. ಇಡೀ ಸಮಾಜದಲ್ಲಿರತಕ್ಕ ಈ ಬೃಹತ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಪೂರ್ವ ಹಿನ್ನಲೆಯನ್ನು ಇಟ್ಟುಕೊಂಡು ಪ್ಲಾನ್ ಅಲೋಕೇಷನ್ ಮಾಡದೇ ಹೋದರ ಕಷ್ಟವಾಗುತ್ತದೆ ಈ ಸಂಬಂಧದ ತಮಗೆ ನಾನು ಕೆಲವು ನಿದರ್ಶನಗಳನ್ನು ಕೊಡುತ್ತೇನೆ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಎಕನಾಮಿಕ್ ಅಪ್‌ಲಿಫ್ಟ್‌ಮೆಂಟಿಗೆ ಇಡೀ ನಮ್ಮ ಇಂಡಿಯಾ ದೇಶಕ್ಕೆ ಕೊಟ್ಟಿರುವುದನ್ನು ನಾನು ಹೇಳುತ್ತೇನೆ. ಮೊದಲನೆಯ ಯೋಜನೆಯಲ್ಲಿ ಹೋಲ್ ಪ್ಲಾನಿಗೆ ೯.೪೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೆಲ್ತ್ ಮತ್ತು ಹೌಸಿಂಗ್‌ಗಾಗಿ ೩.೮೧ ಕೋಟಿ ರೂಪಾಯಿಗಳು. ಎರಡನೇ ಯೋಜನೆಯಲ್ಲಿ ಸ್ಟೇಟ್ ಸೆಕ್ಟಾರ್‌ನಲ್ಲಿ ಎಲ್ಲಾ ರಾಜ್ಯಗಳಿಗೂ ಸೇರಿ ಎಕನಾಮಿಕ್ ಅಪ್‌ಲಿಫ್ಟ್‌ಮೆಂಟಿಗೆ ೨.೩೩ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೆಲ್ತ್ ಅಂಡ್ ಹೌಸಿಂಗಿಗೆ ೨.೬೩ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸೆಂಟ್ರಲ್ ಸೆಕ್ಟಾರಿನಲ್ಲಿ ಎಕನಾಮಿಕ್ ಅಪ್‌ಲಿಫ್ಟ್‌ಮೆಂಟಿಗೆ ೧೧.೧೧ ಕೊಟ್ಟಿದ್ದಾರೆ. ಅದರಲ್ಲಿ ಹೆಲ್ತ್ ಮತ್ತು ಹೌಸಿಂಗಿಗೆ ೫.೩೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಟೇಟ್ ಮತ್ತು ಸೆಂಟ್ರಲ್ ಸೆಕ್ಟಾರಿನಲ್ಲಿ ಇಂಪ್ರೂವಮೆಂಟ್ ಆಫ್ ದಿ ವರ್ಕಿಂಗ್ ಅಂಡ್ ಲೀವಿಂಗ್ ಕಂಡೀಷನ್ಸ್ ಆಫ್ ದೋಸ್ ಎಂಗೇಜ್ಡ್ ಇನ್ ಅನ್‌ಕ್ಲೀನ್ಡ್ ಆಪರೇಷನ್ ಎಂದು ಒಂದು ಹೊಸ ಐಟಂ ಇನ್‌ಕ್ಲೂಡ್ ಮಾಡಿಕೊಂಡಿದ್ದಾರೆ. ಇದರಲ್ಲಿ ೧.೦೫ ಕೋಟಿ ರೂಪಾಯಿಗಳನ್ನು ಹೋಲ್ ಕಂಟ್ರಿಗೆ ಕೊಟ್ಟಿದ್ದಾರೆ. ಹೌಸಿಂಗ್ ಮತ್ತು ಹೌಸ್ ಸೈಟ್ಸ್‌ಗಾಗಿ ೨.೯೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸ್ಟೇಟ್ ಸೆಕ್ಟಾರಿನಲ್ಲಿ ಮೂರನೇ ಯೋಜನೆಯಲ್ಲಿ ಎಕನಾಮಿಕ್ ಅಪ್‌ಲಿಫ್ಟ್‌ಮೆಂಟಿಗೆ ೧೨.೬೯ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೆಲ್ತ್ ಅಂಡ್ ಹೌಸಿಂಗಿಗೆ ೬.೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ವಾರ್ಷಿಕ ಯೋಜನೆಯಲ್ಲಿ ಸೆಂಟ್ರಲ್ ಸೆಕ್ಟಾರಿನಲ್ಲಿ ಇಂಪ್ರೂವ್‌ಮೆಂಟ್ ಆಫ್ ದಿ ವರ್ಕಿಂಗ್ ಅಂಡ್ ಲಿವಿಂಗ್ ಕಂಡೀಷನ್ಸ್ ಆಫ್ ದಿ ಸ್ವೀಪರ್ ಅಂಡ್ ಸ್ಕ್ಯಾವೆಂಜರ್ ಅಂಡ್ ಷೆಡ್ಯೂಲ್ಡ್ ಕ್ಯಾಸ್ಟಿಗೆ ೨೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಷೆಡ್ಯೂಲ್ ಟ್ರೈಬ್ಸ್‌ಗೆ ಪ್ರತ್ಯೇಕವಾದ ಅಮೌಂಟ್ ಇಲ್ಲ. ಸ್ಟೇಟ್ ಸೆಕ್ಟಾರಿನಲ್ಲಿ ವಾರ್ಷಿಕ ಯೋಜನೆಯಲ್ಲಿ ೬೬–೬೭ ನೇ ಸಾಲಿನಲ್ಲಿ ಏನೂ ಕೊಟ್ಟಿಲ್ಲ. ೬೭-೬೮ ನೇ ಸಾಲಿನಲ್ಲಿ ೧೧.೦೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ೬೮–೬೯ ನೇ ಸಾಲಿನಲ್ಲಿ ೨೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸ್ಟೇಟ್ ಸೆಕ್ಟಾರಿನಲ್ಲಿ ಹೆಲ್ತ್ ಅಂಡ್ ಹೌಸಿಂಗಿಗೆ ೮೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ.—ತಮ್ಮ ಸಲಹೆ ಏನು ಎಂಬುದನ್ನು ಹೇಳಿ. ಈಗ ನಾವೇನಾದರೂ ಹೇಳಿದರೆ ಜಾತಿವಾದಿಗಳು ಎಂದು ಹೇಳುತ್ತೀರಿ, ಆದರೆ ನಮ್ಮಪರವಾಗಿ ನೀವು ಜಾಸ್ತಿ ಕೇಳಬಹುದು. ಅದು ತಪ್ಪಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ —ಅದನ್ನು ಹೇಳುವುದಕ್ಕೆ ನಾನು ತಯಾರಾಗಿದ್ದೇನೆ. ಹಿಂದುಳಿದ ವರ್ಗದವರು ತಮಗೆ ರಕ್ಷಣೆ ಕೊಡಬೇಕು ಎಂದು ಕೇಳಿದರೆ ಅದು ಅಪರಾಧ ಎಂದು ಹೇಳಿದರೆ ಅದು

(ಶ್ರೀ ಹೆಚ್. ಡಿ. ದೇವೇಗೌಡ)

ಅವಿವೇಕದ ಪರಮಾವಧಿಯಾಗುತ್ತದೆ. ನಾನು ಹೇಳುವುದೇನೆಂದರೆ, ಇದಕ್ಕೆ ಯಾರು ಕಾರಣಭೂತರಾಗಿದ್ದಾರೆ ಅವರು ರಾಷ್ಟ್ರಮಟ್ಟದಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬಹುದಾಗಿತ್ತು. ಆ ಹಂತದಲ್ಲಿರತಕ್ಕ ದೋಷವನ್ನು ನಾನು ಹೇಳುತ್ತಿದ್ದೇನೆ. ಶ್ರೀಮಾನ್ ರಾಚಯ್ಯನವರು ಹಿಂದೆ ಪಾರ್ಲಿಮೆಂಟ್ ಮೆಂಬರಾಗಿದ್ದರು. ಅವರು ಆಗ ಈ ಬಗ್ಗೆ ಭಾಷಣ ಮಾಡಿದ್ದರೆ ನಾವು ಸಂತೋಷಪಡಬಹುದಾಗಿತ್ತು. ಮತ್ತು ಅವರು ಅಲ್ಲಿ ಎಲ್ಲರೂ ಮೆಚ್ಚಿಕೊಳ್ಳುವ ಕೆಲಸವನ್ನು ಮಾಡಬಹುದಾಗಿತ್ತು

ಶ್ರೀ ಎನ್. ರಾಚಯ್ಯ :—ಈ ಸಂಬಂಧದಲ್ಲಿ ೧೯೬೭-೬೮ ನೇ ಸಾಲಿನಲ್ಲಿ ಅಲೋಕೇಷನ್‌ನಲ್ಲಿ ಕೊಟ್ಟಿದ್ದ ಹಣವನ್ನು ಆಗಿನ ಮುಖ್ಯ ಮಂತ್ರಿಗಳು ಲ್ಯಾಪ್ಸ್ ಮಾಡಿದ್ದಾರೆ. ಮಂಡ್ಯದಲ್ಲಿ ಒಂದು ಕಾಲುವೆಯ ನೀರನ್ನು ಯಾರಿಗೆ ಅಚ್ಚುಕಟ್ಟು ಇತ್ತೋ, ಅವರಿಗೆ ಕೊಡದೆ ಯಾರಿಗೆ ಅಚ್ಚುಕಟ್ಟು ಇಲ್ಲವೋ ಅಂಥವರಿಗೆ ನೀರು ಬಿಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ :—ಆ ರೀತಿ ವೇಗವಾಗಿ ತಾವು ಹೇಳುವುದಕ್ಕೆ ಹೋಗಬೇಡಿ. ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ರಾಜ್ಯ ಸರ್ಕಾರದಿಂದ ಯೋಜನೆಗಳಿಗೇ ಕೇಂದ್ರ ಸರ್ಕಾರದಿಂದ ಸಿಕ್ಕಿದಂತಹ ಹಣವನ್ನು ಯಾರು ಯಾರು ಲ್ಯಾಪ್ಸ್ ಮಾಡಿದ್ದಾರೆ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ :—(ಆರೋಗ್ಯ ಶಾಖೆಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ನಾನು ಯಾವ ಪೂರ್ವಗ್ರಹ ಪೀಡಿತನಾಗಿ ಮಾತನಾಡುವುದಿಲ್ಲ. ನಾವು ಈ ಬಗ್ಗೆ ಒಂದು ಅನ್‌ರಿಯಲ್ ಅಟ್ಮಾಸ್ಫಿಯರ್‌ನಲ್ಲಿ ಮಾತನಾಡುತ್ತಿದ್ದೇವೆ ನಾನು ೧೯೬೧ ನೇ ಇಸವಿಯ ಸೆನ್‌ಸಸ್ ತರಿಸಿ ನೋಡಿದ್ದೇನೆ. ೧೯೩೧ರ ವರೆಗೆ ಇಂಥಾದ್ದಕ್ಕೆ ಅವಕಾಶ ಇತ್ತು. ಈಗ ನನಗೆ ಮಾತನಾಡುವ ಸಮಯ ಬಂದಿಲ್ಲ. ಆ ಅವಶ್ಯಕತೆಯೂ ಸಹ ಕಾಣುತ್ತಾ ಇಲ್ಲ. ನಮ್ಮ ದೇಶದಲ್ಲಿ ಪ್ರಥಮತಃ ಸೆನ್ಸಸ್ ಬಂದುದು ೧೮೮೧ರಲ್ಲಿ. ಎಷ್ಟೋ ವರ್ಷಗಳಿಂದ ಸೆನ್ಸಸ್ ನಡೆದುಕೊಂಡು ಬರುತ್ತಿತ್ತು. ಕೆಲವು ವರ್ಷಗಳ ಕಾಲ ಅನೇಕ ಕಾರಣಗಳಿಂದ ಸೆನ್ಸಸ್ ಎತ್ತುವುದನ್ನು ಬಿಟ್ಟರು. ಆಮೇಲೆ ಪ್ರತ್ಯೇಕವಾಗಿ ರಿಲಿಜಿಯನ್ ಎಂಬುದಾಗಿ ತೆಗೆದುಕೊಂಡು ಎನ್ಯೂಮರೇಷನ್ ಮಾಡಿದ್ದಾರೆ. ೧೯೬೧ನೇ ಇಸವಿಯಿಂದ ರಿಲಿಜಿಯಸ್ ಮೈನಾರಿಟೀಸ್ ಎಂಬುದಾಗಿ ಪ್ರಾಡಾಗಿ ಸೆನ್ಸಸ್ ತೆಗೆಯಬೇಕಾಯಿತು. ಆಗ ಹಿಂದೂಗಳು, ಮುಸಲ್ಮಾನ್ಸ್ ಜೈನ್ಸ್, ಕ್ರಿಶ್ಚಿಯನ್ಸ್ ಮುಂತಾದವರು ಎಂಬುದಾಗಿ ಸೆನ್ಸಸ್ ಮಾಡಿದರು. ಆಮೇಲೆ ಇತ್ತೀಚೆಗೆ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಎಂಬುದಾಗಿ ಮಾಡಿದರು. ಆದರೆ ೧೯೭೧ನೇ ಇಸವಿಯಿಂದೀಚೆಗೆ ಏನು ಮಾಡಲಿಲ್ಲ.

ಶ್ರೀ ಕೆ. ಎಚ್. ರಂಗನಾಥ :—೧೯೬೧ರಲ್ಲಿ ಎಂಬುದಾಗಿ ನಮೂದು ಮಾಡಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ:—ಆಗಲೇ ಅದನ್ನೂ ಮಾಡಿದ್ದಾರೆ. ನನಗೇನು ಸಂಶಯ ಬಂದಿದೆಯೆಂದರೆ ನಾನು ಯಾವ ಜಾತಿಯವನು, ಯಾವ ಜಾತಿಯವನಲ್ಲದ್ದೇನೆ, ಲಿಂಗಾಯಿತ. ಒಕ್ಕಲಿಗರು ಎಂಬುದೂ ಏನೂ ಗೊತ್ತಿಲ್ಲ ಇವು ಈಗ ಚಲಾವಣೆಯಲ್ಲಿರತಕ್ಕ ನಾಣ್ಯಗಳಲ್ಲ. ಅವು ಅನ್‌ಕರೆಂಟ್ ಕಾಯಿನ್ಸ್ ಅವು ಎಲ್ಲಿ ಚಲಾವಣೆಗೆ ಹೋದರೂ ಹಿಡಿಯುವುದಿಲ್ಲ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮಾಡಿದ ಭಾಷಣ ಬಹಳ ವ್ಯವಸ್ಥಿತಗೊಂಡಿತ್ತು. ಅವರು ಬಹಳವಾಗಿ ಹೆಚ್ಚಿಗೆ ಕಷ್ಟಪಟ್ಟು ಅಭ್ಯಾಸಮಾಡಿ ಇಲ್ಲಿ ಹೇಳಿದ್ದಾರೆ. ಅವರು ಹೇಳಿರುವ ಅಭಿಪ್ರಾಯ ಅವರದೇ ವ್ಯಕ್ತಿ ಅಭಿಪ್ರಾಯವಾಗಿತ್ತು. ಆದರೆ ಕೆಲವು ವಿಷಯಗಳಲ್ಲಿ ನನ್ನ ವಿರೋಧವಿದೆ. ಆದರೆ ಅದಕ್ಕೆ ಸಮಯ ಬಂದಾಗ ಅದರ ಬಗ್ಗೆ ಮಾತನಾಡುತ್ತೇನೆ. ಇವತ್ತು ಮಾನ್ಯ ಶ್ರೀ ದೇವೇಗೌಡರು ಏನು ಮಾತನಾಡುತ್ತಿದ್ದಾರೋ ಅದರಲ್ಲಿ ನನಗೇನು ಕಾಣುತ್ತಿದೆಯೆಂದರೆ ಲಿಂಗಾಯಿತರು ಮತ್ತು ಒಕ್ಕಲಿಗರು ಲೂಟಿ ಹೊಡೆದಿದ್ದಾರೆ ಎಂದು ಭಾಸವಾಗುತ್ತಿದೆ. ಅವರಿನ್ನೂ ಏನೇನು ಮಾತನಾಡುತ್ತಾರೋ ನನಗೆ ಗೊತ್ತಿಲ್ಲ. ನಾನು ಯಾವ ನಾಣ್ಯಗಳು ಚಲಾವಣೆಯಲ್ಲಿಲ್ಲ ಎಂಬುದಾಗಿ ಹೇಳಿದನೋ ಅದನ್ನೇ ಹಿಡಿದುಕೊಂಡು ಇವತ್ತು ಅವರು ಅದರ ಬಗ್ಗೆ ಮಾತನಾಡುತ್ತಿದ್ದಾರೆ. ಇದು ಸರಿಯೇ ಎಂಬುದನ್ನು ನವರೇ ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ :—ನೀವು ವೀರಶೈವರ ಸಮ್ಮೇಳನಕ್ಕೆ ಹೋಗಲಿಲ್ಲವೆಂದು ನನಗೆ ಕಾಣುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ :—ನಾನು ಯಾವ ಸಮ್ಮೇಳನಕ್ಕೆ ಬೇಕಾದರೂ ಹೋಗುತ್ತೇನೆ. ಯಾವ ಬ್ಯಾಕ್‌ವರ್ಡ್ ಕ್ಲಾಸೇ ಆಗಲೀ ನದಂ ಹಿಂದಿನಿಂದ ಬೆಳೆದು ಬಂದಿದ್ದರೂ ಸಹ ಅವರ ಬಗ್ಗೆ ನನ್ನ ಸಲಹೆ ಇಷ್ಟೆ ಯಾವ ಜಾತಿಯವರೇ ಆಗಲೀ ಅವರೆಲ್ಲರೂ ಸರ್ವೇಸಾಮಾನ್ಯವಾಗಿ ಮುಂದೆ ಮುಂದೆ ಬರಬೇಕೆನ್ನುವುದರಲ್ಲಿ ನನಗೆ ಯಾವ ರೀತಿಯಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಸುಮಾರು ೪೫–೫೦ ವರ್ಷಗಳಿಂದಲೂ ನಾನು ಮೆನೇಸ್ ಆಫ್ ಹಿಂದೂ ಇಂಪೀರಿಯಲಿಜಂನ್ನು ನೋಡಿದ್ದೇನೆ. ವಿಪ್ಸ್ ಎಂಬತಕ್ಕದ್ದಕ್ಕೆ ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದನ್ನು ಭಾವಗರ್ಭಿತವಾಗಿ ಎಲ್ಲರೂ ಅಭ್ಯಾಸಮಾಡಬೇಕು. ಅದನ್ನು ಬಿಟ್ಟು ಈ ದೇಶದಲ್ಲಿ ಲಿಂಗಾಯಿತರು ಲೂಟಿ ಹೊಡೆದರು ಒಕ್ಕಲಿಗರು ಲೂಟಿ ಹೊಡೆದರು ಎಂಬುದಾಗಿ ಸರ್ವೇಸಾಮಾನ್ಯವಾಗಿ ಬರುವ ಮಾತು ಬೇರೆ. ನಾನು ಆ ವಿಚಾರವಾಗಿ ಇವತ್ತು ಏನೂ ಹೇಳುವುದಿಲ್ಲ. ಈಗ ಬಹು ಮುಖ್ಯವಾಗಿ ಇದರ ವಿಚಾರವಾಗಿ ಮಾತನಾಡಬೇಕೇ, ಬೇಡವೇ ಎಂಬುದು ಇರತಕ್ಕ ಪ್ರಶ್ನೆ. ಜಾತಿಗಳು ನಮ್ಮ ದೇಶದಲ್ಲಿಲ್ಲ, ಸೆನ್ಸಸ್‌ನಲ್ಲಿಯೂ ಇಲ್ಲ. ಅಂದಮೇಲೆ ಲೆಕ್ಕದಲ್ಲಿಯೂ ಇಲ್ಲ. ಅದಕ್ಕಾಗಿ ಇವತ್ತು ಸೆನ್ಸಸ್‌ನಲ್ಲಿ ಇಲ್ಲದಿದ್ದುದನ್ನು ಇಲ್ಲಿ ಏಕೆ ಮಾತನಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ :—ಆಚರಣೆಯಲ್ಲಿ?

ಶ್ರೀ ಎಚ್. ಸಿದ್ಧವೀರಪ್ಪ : ಅದು ಆಚರಣೆಯಲ್ಲಿ ತರುವುದಕ್ಕೆ ಬಹಳ ಕಾಲ ಬೇಕಾಗುತ್ತದೆ. ಆಚರಣೆಗೆ ಇನ್ನೂ ಬಹಳ ದೂರದಲ್ಲಿದ್ದೇವೆ. ಆಚರಣೆಯಲ್ಲಿ ಅನೇಕ ವರ್ಷಗಳಿಂದ ಇದ್ದುದನ್ನು ಇಂದು ನಾವು ಮರೆತು ಕೊತಿದ್ದೇವೆ. ನಮ್ಮ ಗಂಟಲಿನಲ್ಲಿರುವುದನ್ನು ನೀವು ತಿಂದರೆ ನಿಮ್ಮ ಗಂಟಲಲ್ಲಿರುವುದನ್ನು ನಾವು ತಿಂದರೆ, ನಿಮಗೆ ಜಾತಿ ಹೋಗಿಲ್ಲವೆಂದು ಹೇಳಿದರೆ ಅದಕ್ಕೆ ನಾನೇನು ಮಾತನಾಡಲಿ. ಇನ್ನು ಆಚರಣೆ ಎಲ್ಲಿದೆ?

ಶ್ರೀ ಎಸ್. ಬಂಗಾರಪ್ಪ :—ಒಕ್ಕಲಿಗರು, ಲಿಂಗಾಯಿತು ಚಲಾವಣೆಯಲ್ಲಿ ಇಲ್ಲದೇ ಇರತಕ್ಕ ನಾಣ್ಯಗಳು ಎಂಬ ವಾದ ಎಲ್ಲೋ ಇತ್ತೀಚೆಗೆ ಹೊಸದಾಗಿ ಹುಟ್ಟಿರುವ ವಾದ.

ಶ್ರೀ ಎಚ್. ಸಿದ್ಧವೀರಪ್ಪ :—ಯಾವಾಗ ಸೆನ್ಸಸ್‌ನಲ್ಲಿ ಎನ್ಯೂಮರೇಷನ್ ತಪ್ಪಿತೋ ಅವತ್ತಿನಿಂದಲೂ ಇಲ್ಲ

ಶ್ರೀ ಎಚ್. ಡಿ. ದೇವೇಗೌಡ :—ಇವರು ಆ ರೀತಿಯಾಗಿ ಮಂತ್ರಿಗಳಾಗಿ ಹೇಳಿಕೊಳ್ಳಬಹುದು. ಆದರೆ ನಾನು ಇವೆರಡೂ ಚಲಾವಣೆಯಲ್ಲಿ ಇರತಕ್ಕ ನಾಣ್ಯಗಳೆಂದು ಅಭಿಪ್ರಾಯ ಇಟ್ಟುಕೊಂಡು ಹೇಳುತ್ತೇನೆ.

ಶ್ರೀ ಕೆ. ಎಫ್. ಪಾಟೀಲ್ :—ಆ ಜಾತಿಗಳ ಮುಖಂಡರಾದರೂ ಚಲಾವಣೆಯಲ್ಲಿದ್ದಾರೆ. ಅದಕ್ಕಾದರೂ ಜನಗಣತಿ ಬೇಕೋ ಬೇಡವೋ? ಮಾನ್ಯ ಶ್ರೀ ಕೆ. ಎಚ್. ರಂಗನಾಥ ಅವರು ಹೇಳಿದ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಸೆನ್ಸಸ್ ಲೆಕ್ಕ ತೆಗೆಯಬೇಕು, ಅದಲ್ಲದೆ ಉಳಿದ ಸಣ್ಣ ಜಾತಿಗಳ ಬಗ್ಗೆಯೂ ವಿವರಣೆ ಇಲ್ಲ. ಅದಕ್ಕೂ ಜನಗಣತಿ ಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ :—ತಾವು ಒಂದು ಮಾತನ್ನು ಹೇಳಿದಿರಿ. ಏನೆಂದರೆ ಕೇವಲ ಒಕ್ಕಲಿಗರು, ಲಿಂಗಾಯಿತರು ಇವರ ವಿಷಯವನ್ನು ಹಿಡಿದುಕೊಂಡು ಈ ಒಂದು ನಿರ್ಣಯವನ್ನು ಇಲ್ಲಿ ತಂದಿದ್ದಾರೆಂದು, ಈ ರೀತಿಯ ಆಪಾದನೆಯಿಂದ ಎಲ್ಲರೂ ವಿಮುಕ್ತರಾಗಬೇಕು, ಈಗ ಇಲ್ಲಿ ತಂದಿರುವ ನಿರ್ಣಯದ ಫಲ ಕೈಗೂಡಬೇಕು. ಇಂತಹ ನಿರ್ಣಯಗಳ ಬಗ್ಗೆ ಹಿಂದೆ ಮಾತನಾಡುವಾಗ ಈಗಿರತಕ್ಕ ಮಂತ್ರಿಗಳಲ್ಲಿ ಕೆಲವರು ಸುಮಾರು ೨೦ ವರ್ಷಗಳಿಂದಲೂ ಬಹಳವಾಗಿ ಹೇಳಿಕೊಂಡು ಬಂದಿದ್ದಾರೆ. ಅವರಲ್ಲಿ ಕೆಲವರು ಹಿಂದೆಯೂ ಮಂತ್ರಿಗಳಾಗಿದ್ದರು. ಈಗಲೂ ಮಂತ್ರಿಯಾಗಿದ್ದಾರೆ ನಮ್ಮ ಸಮಾಜದಲ್ಲಿ ಚರ್ವಣ ಹದಮಾಡುವವರ ಸಂಖ್ಯೆಯೂ ಬಹಳ ಇದೆ. ಆದ್ದರಿಂದ ನಮ್ಮ ಸಮಾಜದಲ್ಲಿ ಯಾವ ಜಾತಿಯವನೇ ಆಗಿರಲಿ, ಮೊದಲು ಅವನ ಸಮಸ್ಯೆಗಳಿಗೆ ತಕ್ಕ ಪರಿಹಾರ ಕಂಡುಹಿಡಿಯುವುದಕ್ಕೆ ಜನಗಣತಿ ಬೇಕಾಗುತ್ತದೆ. ಜನಗಣತಿಯಲ್ಲಿ ಯಾವ್ಯಾವ ಜಾತಿಯವರು ಎಷ್ಟೆಷ್ಟು ಜನರಿದ್ದಾರೆ ಎಷ್ಟೆಷ್ಟು ಪ್ರಮಾಣದಲ್ಲಿ ಹಿಂದೂಗಳು, ಇತರ ಜನಾಂಗದವರು ಇದ್ದಾರೆ, ಅವರಲ್ಲಿ ಎಷ್ಟೆಷ್ಟು ಜನರು ವಿದ್ಯಾವಂತರಿದ್ದಾರೆ, ಅಧಿಕಾರಿಗಳಾಗಿದ್ದಾರೆಂಬ ಬಗ್ಗೆ ಎಲ್ಲ ರೀತಿಯಲ್ಲಿ ರೂಪರೇಷೆಗಳನ್ನು ಸರ್ಕಾರ ಕೊಡಬೇಕಾಗಿದೆ. ಆದ್ದರಿಂದಲೇ ಇವತ್ತು ಜನಗಣತಿ ಅವಶ್ಯಕವಾಗಿ ಬೇಕು. ಇದು ಕೇವಲ ಒಕ್ಕಲಿಗರ ಹಾಗೂ ಲಿಂಗಾಯಿತರ ರಾಜ್ಯವಲ್ಲ. ಆ ಒಂದು ದೃಷ್ಟಿಕೋನದಿಂದ ಇವತ್ತು ಜನಗಣತಿಯನ್ನು ಮಾಡಲೇ ಬೇಕು. ಇವತ್ತು ಓಟಿಗೆ ಹೋಗುವಾಗ ಎಲ್ಲರೂ ಅವರವರ ಮನೆ ಬಾಗಿಲಿಗೆ ಹೋಗುತ್ತಾರೆ, ಆಮೇಲೆ ಅಧಿಕಾರಕ್ಕೆ ಯಾರೋ ಬರುತ್ತಾರೆ

(ಶ್ರೀ ಹೆಚ್. ಡಿ. ದೇವೇಗೌಡ)

ಹಿಂದುಳಿದ ವರ್ಗದವರೂ ಬರುತ್ತಾರೆ. ಆಗಲೂ ಒಕ್ಕಲಿಗರ ಮನೆ ಬಾಗಿಲಿಗೆ ಮತ್ತೆ ಓಟಿಗಾಗಿ ಹೋಗ ಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಇವತ್ತು ರಾತ್ರಿ ದುಡ್ಡು ತೆಗೆದುಕೊಂಡು ಘಂಡಾರಿ ಕೆಲಸವನ್ನು ಮಾಡುತ್ತಾರೆ. ಅದೂ ಕೂಡ ಈಗ ಬರುತ್ತಿದೆ. ಓಟಗೋಸ್ಕರ ಜಾತಿ ಬೆಡಂವುದು ಅಗ ಬರುತ್ತದೆ. ಇವತ್ತು ಎಲ್ಲಾ ವಿಷಯಗಳನ್ನೂ ಸರಿಯಾಗಿ ತುಲನಮಾಡಿ ಪರಿಹಾರ ಕಂಡು ಹಿಡಿಯಬೇಕಾದರೆ, ಜನಗಣತಿ ಆಗಲೇ ಬೇಕು. ಆ ಒಂದು ದೃಷ್ಟಿಯಿಂದಲೇ ಈ ನಿರ್ಣಯ ಇಲ್ಲಿ ಬಂದಿರುವುದು.

ಇನ್ನು ಶಿನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಇದಕ್ಕಾಗಿ ಒಂದು ಕಮಿಟಿ ನೇಮಕವಾಗಿರುವುದೂ ಉಂಟು.

ಶ್ರೀ ಎನ್. ರಾಚಯ್ಯ :—ಅದೊಂದೇ ಅಲ್ಲ. ಎಲ್ಲ ವರದಿಗಳನ್ನೂ ಈಗ ಒದಗಿಸಿಕೊಟ್ಟಿದ್ದಾರೆ, ಅಪ್‌ಲಿಫ್ಟ್‌ಮೆಂಟ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಕೆಲವು ಜಾತಿಗಳ ಬಗ್ಗೆ ಎರಡು ರಾಜ್ಯಗಳಲ್ಲಿ ಡೋಕಾ ಆಯಿತೆಂದು ತಾವು ಹೇಳಿರುವುದೂ ಕೂಡ ಆ ವರದಿಯಲ್ಲಿ ಹೇಳಿದ್ದಾರೆ.

SRI H. D. DEVEGOWDA :—The Committee noticed that the tempo of exenditure during the first three years of the Fourth Plan has been very sliow. ಆದರೂ ಕೂಡ ಇವರು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುತ್ತಾರೆ ಕಾಂಗ್ರೆಸ್ ಡಿವೈಡ್ ಆದಮೇಲೆ ಇದಕ್ಕೋಸ್ಕರವೇ ಇವರು ಜ ್ರತಾಳಿದ್ದಾರೆಂದು ಬೇರೆ ಹೇಳುತ್ತಾರೆ.

"The Committee have noted that the Ist, Second, Third and the Fourth Five Year Plans, the percentage of backward class outlay to the total outlay of the public sector was to the extent of —

Ist Plan	...	...	1-63	per cent
IInd Plan	...	...	1-87	,,
IIIrd Plan	...	...	1-52	,,
IVth Plan	...	...	0-90	,,

ಈ ನಾಲ್ಕು ಪ್ಲಾನಿನಲ್ಲೂ ಈ ಸಮಸ್ಯೆ ಎಷ್ಟು ದೊಡ್ಡದಾಗಿದೆಯೋ ಮತ್ತು ಇವಕ್ಕೆ ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟನ್ನು ಒದಗಿಸದಿದ್ದರೂ, ಒದಗಿಸಿರತಕ್ಕ ಹಣ ಬಹಳ ಕಡಿಮೆ ಎಂಬುದನ್ನು ಅವರು ಒತ್ತಿಹೇಳಿದ್ದಾರೆ.

ಇನ್ನು ಯಾವ ಯಾವ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಹಣ ಎಷ್ಟೆಷ್ಟು ಖರ್ಚಾಗಿದೆ ಎಂಬುದನ್ನು ತಿಳಿಸದೆ ಇದ್ದಾಗ್ಯೂ ಒಟ್ಟು ಹಿಂದುಳಿದ ವರ್ಗದವರಿಗೆ ಒಂದನೇ ಪ್ಲಾನಿನಲ್ಲಿ ೧-೬೩ ಪರ್ಸೆಂಟ್ ; ಎರಡನೇ ಪ್ಲಾನಿನಲ್ಲಿ ೧-೮೭ ಪರ್ಸೆಂಟ್ ; ಮೂರನೇ ಪ್ಲಾನಿನಲ್ಲಿ ೧-೫೨ ಪರ್ಸೆಂಟ್ ನಾಲ್ಕನೇ ಪ್ಲಾನಿನಲ್ಲಿ ೦ ೯೦ ಪರ್ಸೆಂಟ್ ಮತ್ತು ಈಗಿನ ಪ್ಲಾನಿನ ಫಿಗರ್ಸ್‌ನ್ನು ಇನ್ನೂ ಕೊಡುವುದಕ್ಕಾಗಿಲ್ಲ. ಈ ದಿವಸ ಈ ಸಮಸ್ಯೆ ಎಷ್ಟು ಬೃಹದಾಕಾರವಾಗಿ ಬೆಳೆದು ನಿಂತಿದ್ದರೂ ಸಹ ಇದನ್ನು ಎಫೆಕ್ಟೀವಾಗಿ ಟ್ಯಾಕಲ್ ಮಾಡುವುದಕ್ಕೆ ಕೇಂದ್ರ ಸರ್ಕಾರವಾಗಲೀ ಅಥವಾ ಪ್ಲಾನಿಂಗ್ ಕಮಿಷನ್ನಿನವರಾಗಲಿ ಸಾಕಷ್ಟು ಹಣವನ್ನು ಇದಕ್ಕೆ ಕೊಟ್ಟಿಲ್ಲ; ಈ ಒಂದು ಆಪಾದನಗೆ ಅವರು ಗುರಿಯಾಗಿದ್ದಾರೆ. ಅಂದಾಗ ಇದಕ್ಕೆಲ್ಲಾ ಯಾರು ಕಾರಣರು ಎಂಬುದನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಹೀಗೆ ವಾಸ್ತವಾಂಶಗಳಿದ್ದಾಗ್ಯೂ ಅಪಪ್ರಚಾರ ಮಾತ್ರ ಸಾಕಷ್ಟು ನಡೆಯುತ್ತಲೇ ಇದೆ ಆದರೆ ನಮ್ಮ ರಾಜ್ಯದಲ್ಲಿ ಜನತೆಗೆ ಸಾಕಷ್ಟು ವಿದ್ಯೆ ಇಲ್ಲದಿರುವುದರಿಂದ ಇಂಥ ಅಪ್ರಮಾಣ ಹೇಳಿಕೆಗಳಿಗೆ ಮರುಳಾಗತಕ್ಕ ಜನರೂ ಇದ್ದಾರೆ. ಈ ಬಾಬಿಗೆ ಸಾಕಷ್ಟು ಹಣವನ್ನು ಒದಗಿಸಲಾಗಿದೆ ಎಂದು ಈಗಿನ ಪಂಚವಾರ್ಷಿಕ ಯೋಜನೆಯಲ್ಲಿಯಾದರೂ ತಿಳಿಸಿದ್ದಾರೆಯೋ ಅಂದರೆ, ಅದೂ ಇಲ್ಲ. ಹೀಗೆ ನಮ್ಮ ರಾಷ್ಟ್ರದ ನಾಯಕರು ಯಾರು ಮುಂಖಕ್ಕೆ ಮಸಿ ಬಳಿಯಬೇಕೆಂದು ಹೀಗೆಲ್ಲಾ ಮಾಡುತ್ತಿದ್ದಾರೆಂಬುದನ್ನು ಜನತೆ ಅರಿತುಕೊಳ್ಳದೆ ಇಲ್ಲ. ಮಾನ್ಯ ಕೆ. ಹೆಚ್. ರಂಗನಾಥ್ ಅವರಿಗೆ ಒಂದು ಮಾತನ್ನು ಹೇಳಬೇಕೆಂದರೆ, ಅವರು ದೊಡ್ಡವರು; ಆದಕಾರಣ ಯಾವಾಗಲೂ ದೊಡ್ಡ ರೀತಿಯಲ್ಲೇ ಅವರು ಕೆಲಸಮಾಡಬೇಕು. ಅವರು ಸಣ್ಣ ಕೆಲಸಗಳಿಗೆ ಕೈಹಾಕಬಾರದು. ಅವರು ಸಣ್ಣ ಕೆಲಸಕ್ಕೆ ಕೈಹಾಕಿದರೆ ಅದನ್ನೇ ಅವರಿಗೆ ಹಿಮ್ಮುಖ ಮಾಡಬೇಕಾಗುತ್ತದೆ ಆದರೆ ದೊಡ್ಡವರೆನಿಸಿ ಕೊಂಡವರು ದೊಡ್ಡ ರೀತಿಯಲ್ಲಿ ನಡೆದುಕೊಳ್ಳಲಿಲ್ಲ.

ಇನ್ನು ನಾನೀಗ ಕೇಂದ್ರ ಸರ್ಕಾರದವರು ಯಾವ ರೀತಿ ಅಪಾಯಿಂಟ್‌ಮೆಂಟುಗಳನ್ನು ಕೊಟ್ಟಿದ್ದಾರೆಂಬ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಇಲ್ಲಿ ಕೆಲವು ಮಾನ್ಯ ಸದಸ್ಯರು ಡಾ|| ನಾಗನಗೌಡ ವರದಿಯನ್ನು ಪ್ರಸ್ತಾಪಮಾಡುತ್ತ ಅದರ ಬಗ್ಗೆ ಮಾತನಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದಲ್ಲಿ ಈ ಹೊತ್ತಿನವರೆಗೂ ಕೂಡ ಅಲ್ಲಿ ಮೂರು ಮತ್ತು ನಾಲ್ಕನೇ ದರ್ಜೆಯ ನೌಕರಿಗಳಲ್ಲಿ ಯಾವ ಒಂದು ಇಲಾಖೆಯಲ್ಲೂ ಈ ಹಿಂದುಳಿದ ವರ್ಗದವರಿಗೆ ಸ್ಥಾನಗಳನ್ನು ಮೀಸಲಾಗಿಟ್ಟಿಲ್ಲ. ೧೯೭೭ರಿಂದ ಇತ್ತೀಚೆಗೆ ಈ ಓಟಿನ ಬೇಟೆಗಾಗಿ ಎಷ್ಟು ಕಡೆಗಳಲ್ಲಿ ಎಷ್ಟೆಷ್ಟು ಈ ಜಾತಿಯ ಸಮ್ಮೇಳನಗಳನ್ನು ಮಾಡಿದ್ದಾರೆ? ಅನೇಕ ಸಮ್ಮೇಳನಗಳಲ್ಲಿ ನಮ್ಮ ಮುಖ್ಯ ಮಂತ್ರಿಗಳು ಈ ಅಲ್ಪಸಂಖ್ಯಾತ ಪಂಗಡಗಳವರನ್ನು ಉದ್ಧಾರಮಾಡುವುದಕ್ಕಾಗೇ ಅವರು ಅವತಾರವನ್ನೆತ್ತಿದ್ದಾರೆಂದು ಸಹಾ ಹೇಳಿಕೊಂಡಿದ್ದಾರೆ. ಈ ದಿವಸ ಮಾನ್ಯ ರಾಥೋಡ್ ಅವರಿಗೇನೋ ಒಬ್ಬರಿಗೆ ಇಲ್ಲಿ ಒಂದು ಸ್ಥಾನ ಸಿಕ್ಕಿರಬಹುದು. ಇದರಿಂದ ಅವರ ಕೋಮಿನಗೆಲ್ಲ ಹೊಟ್ಟೆತುಂಬಿದಂತಾಯಿತೋ? ೧೯೪೭ ರಿಂದ ೧೯೭೭ ರವರೆಗೆ ಎಷ್ಟು ಜನರಿಗೆ ಅವಕಾಶ ಸಿಕ್ಕಿದೆ ಎಂದರೆ ೧೯೪೭ ರಿಂದ ಇವತ್ತಿನವರೆಗೆ ಲೆಕ್ಕ ತೆಗೆದುಕೊಂಡರೆ ಮಾನ್ಯ ರಾಥೋಡ್ ಒಬ್ಬರಿಗೆ ಕೆಲಸ ಸಿಕ್ಕಿದೆ ಇಲ್ಲೇನೋ ಹೀಗಾದರೆ ಆ ಕೇಂದ್ರ ಸರ್ಕಾರದಲ್ಲೋ? ನಾನು ಈಗ ಎಲ್.ಐ.ಸಿ. ಮತ್ತು ಬ್ಯಾಂಕುಗಳನ್ನು ಬಿಟ್ಟು ಮಾತನಾಡುತ್ತಿದ್ದೇನೆ. ಕೇಂದ್ರ ಸರ್ಕಾರದಲ್ಲಿ ಕಡೆಗೆ ಯಾವುದೂ ಬೇಡ, ನಾಲ್ಕನೇದರ್ಜೆ ಪೋರ್ಟರ ಕೆಲಸಗಳನ್ನಾದರೂ ರಿಜರ್ವ್ ಮಾಡಿದ್ದಾರೆಯೇ ಎಂದರೆ, ಅದೂ ಸಹ ಇಲ್ಲ. ಇದನ್ನೆಲ್ಲಾ ತಿಳಿದುಕೊಂಡಿರತಕ್ಕ ಮಾನ್ಯ ಸದಸ್ಯರುಗಳು ತಮ್ಮ ನಾಯಕರಿಗೆ ರಾಜ್ಯಮಟ್ಟದಲ್ಲಿ ಮತ್ತು ಕೇಂದ್ರ ಮಟ್ಟದಲ್ಲಿ ಏಕೆ ತಿಳಿಸಬಾರದು? ತಮಗೆ ಯಾರಿಗೋ ನಾಲ್ಕೈದು ಜನರಿಗೆ ಇಲ್ಲಿ ಅಧಿಕಾರ ಸ್ಥಾನಸಿಕ್ಕಿತು ಎಂದು ಬರಿ ಹೊಗಳಭಟ್ಟಂಗಿ ಕೆಲಸ ಮಾಡಿಕೊಂಡಿದ್ದರೆ, ಇದು ಬಹಳ ದಿನ ನಿಲ್ಲಲಾರದು. ಆದರೆ ಒಂದೆರಡು ಚುನಾವಣೆಗಳಲ್ಲಿ ಲಾಭವಾಗಬಹುದು. ಆದರೆ ಯಾವಾಗಲೂ ಈ ನಾಟಕ ನಡೆಯುವುದಿಲ್ಲ. Even based on economic consideration or economic backwardness, there is no reservation for the Scheduled Castes and the Scheduled Tribes people.

ಈ ವಿಚಾರದಲ್ಲಿ ನಾನು ಪತ್ರವ್ಯವಹಾರ ಕೂಡ ಮಾಡಿದ್ದೇನೆ..................

ಶ್ರೀ ಎನ್. ರಾಚಯ್ಯ.—ಹಾಗಾದರೆ ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಎಂದರೆ ಯಾರು?

SRI H. D. DEVEGOWDA.—ಆ ಕಮಿಟಿಯವರು ಈ ರೀತಿ ಹೇಳಿದ್ದಾರೆ:—

"The Committee is distressed to find insignificant representation to the Scheduled Castes in Class I and Class II of the Railway Board as well the Railways They also regret to note that even in Class III service, the representation of the Scheduled Castes is much below the quota reserved for them and the representation of the Scheduled Tribes is very insignificant. The unrepresentation of the Scheduled Tribes persists in Class IV service also".

ಶ್ರೀ ಕೆ. ಟಿ. ರಾಥೋಡ್.—ನಾನು ರೈಲ್ವೆನಲ್ಲಿ ಓಡಾಡುವಾಗ ಕೆಲವು ಲಂಬಾಣಿಮತದವರು ಕೆಲಸದಲ್ಲಿದ್ದದ್ದನ್ನು ನಾನು ನೋಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಎಲ್ಲೋ ಅಪ್ಪಿತಪ್ಪಿ ಒಬ್ಬಿಬ್ಬರು ಲಂಬಾಣಿಯವರು ಅರ್ಜಿ ಹಾಕಿಕೊಂಡಿರಬಹುದು, ಅವರಿಗೆ ಕೆಲಸ ಕೊಟ್ಟಿರಬಹುದು. ಆದರೆ ನಾನು ಕೇಳುತ್ತಿರುವುದು ಅವರಿಗಾಗಿ ಕೆಲವು ಹುದ್ದೆಗಳನ್ನು ರಿಜರ್ವ್ ಮಾಡಿದ್ದಾರೆಯೇ ಎಂದು? ಅದು ಹೋಗಲಿ ಈ ಎಕನಾಮಿಕಲಿ ಬ್ಯಾಕ್‌ವರ್ಡ್ ಆಗಿರತಕ್ಕವರಿಗಾದರೂ ರಿಜರ್ವೇಷನ್ ಮಾಡಿದ್ದಾರೆಯೇ ಎಂದರೆ ಅವರಿಗೂ ಇಲ್ಲ. ಸರ್ಕಾರದವರು ೩೦೦೦ ಅಥವಾ ೪೦೦೦ ರೂಪಾಯಿಗಳನ್ನೋ ಏನೋ ಆದಾಯದ ಬಗ್ಗೆ ಒಂದು ನಿಗದಿ ಮಾಡಿದ್ದಾರೆ. ಅದಕ್ಕೆ ಕಡಿಮೆ ಆದಾಯ ಇರತಕ್ಕವರಿಗಾದರೂ ರಿಜರ್ವೇಷನ್ ಇದೆಯೇ? ಈ ಹೊಸ ಒಂದು ಆಡಳಿತ ದೇಶಾದ್ಯಂತ ಜಾರಿಗೆ ಬಂದ ನಂತರ ಇವರಾದರೂ ಆ ವರ್ಗಗಳಿಗೇನು ದೊಡ್ಡ ಉಪಕಾರ ಮಾಡಿದ್ದಾರೆ?

ಶ್ರೀ ಎನ್. ರಾಚಯ್ಯ.—ಇಲ್ಲಿ ನಾವು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ನೇಮಕ ಮಾಡಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಏನೋ ಹೇಳುತ್ತಿದ್ದರೆ ಇವರು ಆ ಇಮಾಂಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಅಂದಹಾಗೆ ಏನೋ ಹೇಳುತ್ತಿದ್ದಾರೆ.

ಇನ್ನು ನಾನು ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ್ದನ್ನೂ ಕೂಡ ಒಪ್ಪುವುದಿಲ್ಲ. ಈ ವರದಿಯಲ್ಲಿ ಹೇಳಿರತಕ್ಕ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿನವರಿಗೂ ಇಲ್ಲಿ ಕಸ ಗುಡಿಸತಕ್ಕ ಕೆಲಸದಲ್ಲೂ ರಿಜರ್ವೇಷನ್ ಮಾಡಿಲ್ಲ. ಮಿನಿಸ್ಟ್ರಿ ಆಫ್ ಸ್ಟೀಲ್, ಅಲ್ಲಿ ಕೂಡ ಕ್ಯಾಜುಯಲ್ ಲೇಬರರ್ಸಿಗೂ ರಿಜರ್ವೇಷನ್ ಇಲ್ಲ.

ಆಮೇಲೆ ಯಾವ ಯಾವ ಮಂತ್ರಿಮಂಡಲದಲ್ಲಿ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟಿನವರು ಕೆಲಸ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಸೆಕ್ರೆಟೆರಿಯಟ್‌ನಲ್ಲಿ ಒಂದು ವರದಿ ಇದೆ. ಪ್ರೈಂ ಮಿನಿಸ್ಟರ ಸೆಕ್ರೆಟರಿಯಟ್ಟಿನಲ್ಲಿ ಹಿಂದುಳಿದವರು ಒಬ್ಬರೂ ಇಲ್ಲ ಎಂದು ವರದಿಯಲ್ಲಿದೆ. ಆಮೇಲೆ ಕೇಂದ್ರ ಸರಕಾರದ ಪಬ್ಲಿಕ್ ಅಂಡರ್–ಟೇಕಿಂಗ್ಸ್ ಬಗ್ಗೆ ಪೂರ್ಣ ವಿವರಣೆ ಇದೆ. ಯಾವ ಅಂಡರ್‌ಟೇಕಿಂಗ್ಸ್ ನೋಡಿದರೂ ಕೆಲವರ ಬಗ್ಗೆ ಜೀರೋ ಪಾಯಿಂಟ್ ಇದೆ. ಇದನ್ನು ೧೯೭೩ರ ಲೇಟೆಸ್ಟ್ ವರದಿ ಪ್ರಕಾರ ನಾನು ಹೇಳುತ್ತಿರುವುದು. ಹುಳುವುದೊಂದು ಮಾಡುವುದೊಂದು ಆಗಬಾರದು. ಇನ್ನು ಐ.ಎ.ಎಸ್., ಐ.ಪಿ.ಎಸ್. ಮುಂತಾದುವುಗಳ ಬಗ್ಗೆ ೧೯೭೧ರ ಫಿಗರ್ಸ್ ಹೇಳುತ್ತೇನೆ. ಐ.ಸಿ.ಎಸ್., ಮತ್ತು ಐ.ಎ.ಎಸ್. ಹುದ್ದೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಶೇಕಡ ೨–೯೦ ರಷ್ಟಿದ್ದಾರೆ. ಐ.ಪಿ.ಎಸ್. ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ೬ ೩೭ ಹುದ್ದೆಗಳು, ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ೧–೭ ಹುದ್ದೆಗಳು ಇವೆ. ಐ.ಎಫ್.ಎಸ್. ಹುದ್ದೆಗಳ ವಿವರ ಇಲ್ಲ, ಸಂಬಂಧಪಟ್ಟ ಸಮಿತಿಗೆ ವಿವರ ಒದಗಿಸುವುದಕ್ಕಾಗಲಿಲ್ಲ ಎಂದು ಕಾಣುತ್ತದೆ. ಆಮೇಲೆ ಕ್ಲಾಸ್ ಒಂದರ ಹುದ್ದೆಗಳನ್ನು ನೋಡೋಣ. ೧೯೭೧ರ ಅಂಕಿಅಂಶಗಳ ಪ್ರಕಾರ ಕ್ಲಾಸ್ ಒಂದರ ಹುದ್ದೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರು ಸೇಕಡ ೨–೭೦ ಮಂದಿ ಇದ್ದಾರೆ, ಷೆಡ್ಯೂಲ್ಡ್ ಟ್ರೈಬ್ಸ್‌ನವರು ೦–೪೩ ಇದ್ದಾರೆ. ಕ್ಲಾಸ್ ಎರಡರ ಹುದ್ದೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರು ಸೇಕಡ ೪–೪೧ ಜನರು, ಷೆಡ್ಯೂಲ್ಡ್ ಟ್ರೈಬ್ಸ್‌ನವರು ೦–೪೮ ಜನರು ಇದ್ದಾರೆ. ಕ್ಲಾಸ್ ೩ರ ಹುದ್ದೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರು ಸೇಕಡ ೧೦ ಮಂದಿ ಮತ್ತು ಷೆಡ್ಯೂಲ್ಡ್ ಟ್ರೈಬ್ಸಿನವರು ಸೇಕಡ ೧–೦೫ ಮಂದಿ ಇದ್ದಾರೆ. ನಾಲ್ಕನೆ ದರ್ಜೆ ಹುದ್ದೆಗಳಲ್ಲಿ ಸೇಕಡ ೧೮ ರಷ್ಟು ಸಹ ಭರ್ತಿಯಾಗಿಲ್ಲ, ಷೆಡ್ಯೂಲ್ಡ್ ಕಾಸ್ಟಿನವರು ಸೇಕಡ ೧೭–೭ ಜನರು, ಷೆಡ್ಯೂಲ್ಡ್ ಟ್ರೈಬ್ಸ್‌ನವರು ಸೇಕಡ ೩–೯೬ ಜನರಿದ್ದಾರೆ. ಇದು ಇಂಡಿಯಾ ಸರಕಾರದ ಹುದ್ದೆಗಳಿಗೆ ಸಂಬಂಧಪಟ್ಟಿದ್ದು, ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ ಸಂಬಂಧಪಟ್ಟಿದ್ದು ಬೇರೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ದು ಬಹುತೇಕವಾಗಿ ಸೊನ್ನೆ ಇದೆ. ನಾನು ಈಗ ಡಿಪಾರ್ಟ್‌ಮೆಂಟಲ್ ಅಪಾಯಿಂಟ್‌ಮೆಂಟ್ ಫಿಗರ್ಸ್ ಕೋಟ್ ಮಾಡುತ್ತಿದ್ದೇನೆ. ಇದನ್ನು ಕೋಟ್‌ಮಾಡುವ ಉದ್ದೇಶ ಈಗಲಾದರೂ ಕಡಿಮೆ ಇರುವುದನ್ನು ಭರ್ತಿಮಾಡಲು ಪ್ರಯತ್ನಮಾಡಲಿ ಎಂದು. ಪರಿಸ್ಥಿತಿ ಉಲ್ಬಣವಾಗುವುದಕ್ಕೆ ಮುಂಚೆ ಇದರ ಬಗ್ಗೆ ಪರಿಹಾರ ಕಂಡುಹಿಡಿಯಬೇಕಾದ್ದು ಸರಕಾರದ ಕರ್ತವ್ಯವಾಗಿದೆ. ಜನಗಣತಿ ಮಾಡಿ ಸಮಸ್ಯೆ ಅರ್ಥಮಾಡಿಕೊಂಡು ಪರಿಹಾರ ಒದಗಿಸಬೇಕು. ಕೇಂದ್ರ ಸರಕಾರದ ಬಗ್ಗೆ ಹೆಚ್ಚು ಹೇಳಬೇಕಾದ ಅವಶ್ಯಕತೆಯಿಲ್ಲ. ಆ ಸರಕಾರದವರು ಬ್ಯಾಂಕುಗಳ ರಾಷ್ಟ್ರೀಕರಣವಾದಮೇಲೆ ಹಿಂದುಳಿದವರಿಗೆ ಎಷ್ಟು ಹುದ್ದೆ ಕೊಟ್ಟಿದ್ದಾರೆ ? ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಸ್ವಲ್ಪ ಕೊಟ್ಟಿರಬಹುದು. ಅದರ ಬಗ್ಗೆ ಅಂಕಿಅಂಶವಿಲ್ಲ. ಎಲ್.ಐ.ಸಿ. ಮತ್ತು ಪ್ರೈವೇಟ್ ಸಂಸ್ಥೆಗಳ ಅಂಕಿಅಂಶ ಸಿಕ್ಕಿಲ್ಲ. ಇದರ ಬಗ್ಗೆ ಈಗಲಾದರೂ ಸಮಸ್ಯೆಗನುಗುಣವಾದ ಪರಿಹಾರ ಕಂಡುಹಿಡಿಯುವಂತೆ ಕೇಂದ್ರ ಸರಕಾರದಲ್ಲಿ ಮನವಿಮಾಡಬೇಕು. ಆ ರೀತಿ ಮಾಡಬೇಕಾದರೆ ಮೊದಲು ಜನಗಣತಿಯಾಗಬೇಕು.

ಇನ್ನು ರಾಜ್ಯ ಸರಕಾರದ ವಿಚಾರಕ್ಕೆ ಬರೋಣ. ಐ.ಎ.ಎಸ್., ಮತ್ತು ಐ.ಪಿ.ಎಸ್. ನಲ್ಲಿ ೩ ಹುದ್ದೆ ಸಹ ಇಲ್ಲ. ಮುಖ್ಯಮಂತ್ರಿಗಳು ಒಂದು ಸಲ ಇನ್ನುಮೇಲೆ ಜಾತಿ ವಿಚಾರಕ್ಕೆ ಅವಕಾಶವಿಲ್ಲವೆಂದು ಹೇಳಿದರು. ಆದರೆ ರಾಜ್ಯ ಸರಕಾರ ಇವರಿಗಾಗಿ ಮಾಡಿರುವುದಾದರೂ ಏನು ? ಕರ್ನಾಟಕದಲ್ಲಿ ೧೯೪೭ ರಿಂದ ೧೯೭೧ ರವರೆಗೆ ಎರಡು ಪ್ರಮುಖ ಕೋಮುಗಳು ಈ ರಾಜ್ಯವನ್ನು ಆ ಕೋಮುಗಳ ಮುಖಂಡರು ಈ ರಾಜ್ಯವನ್ನಾಳಿದ್ದಾರೆ. ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಮೊದಲನೆಯದಾಗಿ ಇಷ್ಟು ಹೇಳುತ್ತೇನೆ. ಮುಖ್ಯ ಮಂತ್ರಿಗಳು, ಮಂತ್ರಿಗಳು. ಎಂ.ಎಲ್.ಎ., ಗಳು ಅವರ ನೆಂಟರಿಷ್ಟರು ಯಾರು ಯಾರು ಎಷ್ಟೆಷ್ಟು ಆಸ್ತಿಯನ್ನು ಮಾಡಿಕೊಂಡಿದ್ದಾರೆನ್ನುವ ಆರೋಪಣೆಯನ್ನು ಮಾನ್ಯ ತಿಮ್ಮಪ್ಪನವರು ಮಾಡಿದ್ದಾರೆ. ಇದು ಗಣನೆಗೆ ತೆಗೆದುಕೊಳ್ಳಬೇಕಾದ ಆರೋಪಣೆ. ೧೯೪೭ ರಿಂದ ೧೯೭೧ರ ವರೆಗೆ ಅಧಿಕಾರದಲ್ಲಿದ್ದವರು ಅವರ ನೆಂಟರಿಷ್ಟರು ಏನೇನು ಆಸ್ತಿ ಮಾಡಿಕೊಂಡಿದ್ದಾರೆ, ಏನೇನು ಸವಲತ್ತು ಗಳನ್ನು ಪಡೆದಿದ್ದಾರೆ, ಎಷ್ಟು ಜನರಿಗೆ ಐ.ಎ.ಎಸ್., ಹುದ್ದೆ ಸಿಕ್ಕಿದೆ, ಕ್ಲಾಸ್ ೧, ಕ್ಲಾಸ್ ೨ ಕ್ಲಾಸ್ ೩ ಇತ್ಯಾದಿ ಎಷ್ಟು ಪಡೆದುಕೊಂಡಿದ್ದಾರೆ, ಅವರು ಯಾವ ಪಕ್ಷದವರೇ ಆಗಿರಲಿ, ಆಗ ಕಾಂಗ್ರೆಸನಲ್ಲಿದ್ದು

ಈಗ ಕಾಂಗ್ರೆಸ್‌ನಲ್ಲಿ ಇಲ್ಲದೇ ಇರಬಹುದು, ಆ ಹೊತ್ತು ವಿರೋಧ ಪಕ್ಷದಲ್ಲಿದ್ದು ಈ ಹೊತ್ತು ಆಳುವ ಪಕ್ಷದಲ್ಲಿರಬಹುದು ; ಸಂಬಂಧಪಟ್ಟ ಎಲ್ಲ ಅಂಕಿಅಂಶಗಳನ್ನೂ ಪತ್ತೆ ಹಚ್ಚಬೇಕು. ಮುಖ್ಯ ಮಂತ್ರಿಗಳಾಗಲೀ, ಮಂತ್ರಿಗಳಾಗಲೀ, ಇತರರೇ ಆಗಲೀ ಅವರ ಸಂಬಂಧೀಕರಿಗೆ ಏನೇನು ಹುದ್ದೆಗಳನ್ನು ಅವರ ಕಾಲದಲ್ಲಿ ಹೊಡೆದುಕೊಂಡಿದ್ದಾರೆ ಎನ್ನುವುದನ್ನು ಸ್ಥೂಲವಾಗಿ ಪರಿಶೀಲನೆ ಮಾಡಿಸಬೇಕಾದ ಅಗತ್ಯವಿದೆ ; ಅದನ್ನು ಮಾಡಿಸಬೇಕು. ಸುಮ್ಮನೆ ನಿರಾಧಾರವಾಗಿ ಹೇಳಿದರೆ ಪ್ರಯೋಜನವಿಲ್ಲ. ದೇವೇಗೌಡರು ಹೊಡೆದುಕೊಂಡು ಹೋದರು ಎಂದು ಹೇಳಿದರೆ ಅದು ನಿಜವೆಂದೇ ಜನ ನಂಬಬಹುದು ದೇವೇಗೌಡರ ಮಗನಿಗೆ ಐ.ಎ.ಎಸ್., ಕೆಲಸ ಕೊಟ್ಟಿದಾರೆಂದು ಯಾರೋ ಮೈಸೂರಿನಲ್ಲಿ ಮಾತನಾಡಿಕೊಂಡರಂತೆ. ದೇವೇಗೌಡರಿಗೆ ಆ ವಯಸ್ಸಿನ ಮಗನಿದ್ದಾನೆಯೇ ಹೇಗೆ ಎಂದು ಯಾರೂ ಯೋಚನೆ ಮಾಡುವುದಿಲ್ಲ. ಮಾಜಿ ಕೈಗಾರಿಕಾ ಮಂತ್ರಿಗಳ ಮಗ ಏನೋ ಮಾಡಿದ ಎಂದು ಹೇಳಿದರು. ಯಾವ ಹಿಂದಿನ ಕೈಗಾರಿಕಾ ಮಂತ್ರಿಯೋ ಏನೋ ? ಯಾರಿಗೆ ವಿವರಗಳೆಲ್ಲ ಗೊತ್ತಾಗುತ್ತದೆ ? ಆಗ ನಾವು ಇನ್ನೂ ಹುಡುಗರು. ನಮ್ಮ ಊರಿನ ಹತ್ತಿರ ಬಾವುಟ ಹಿಡಿಯುತ್ತಿದ್ದೆವು. ವಿಧಾನ ಸೌಧದ ಗಾಳಿ ಕುಡಿಯುತ್ತಿರಲಿಲ್ಲ. ಮುಖ್ಯವಾಗಿ ಮಂತ್ರಿಗಳಾಗಿದ್ದವರು, ಅಥವಾ ಅಧಿಕಾರ ಸ್ಥಾನದಲ್ಲಿದ್ದ ದೇವೇಗೌಡರಾಗಲೀ, ವೀರೇಂದ್ರ ಪಾಟೀಲರಾಗಲೀ, ನಿಜಲಿಂಗಪ್ಪನವರಾಗಲೀ, ಎಂ.ಎಲ್.ಎ., ಗಳಾಗಲೀ, ಎಷ್ಟೆಷ್ಟು ಮಾಡಿಕೊಂಡಿದ್ದಾರೆ, ಅವರ ನೆಂಟರ ಹೆಸರಿನಲ್ಲಿ ಎಷ್ಟೆಷ್ಟು ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ವಿಚಾರಣೆ ಯಾಗಬೇಕಾಗಿದೆ. ಮಾನ್ಯ ರಾಚಯ್ಯನವರು ಉತ್ತರ ಕೊಡುವಾಗ ಇದನ್ನು ಮಾಡಿಸುವುದಾಗಿ ಹೇಳಿದರೆ ದೇಶದ ಜನತೆಯ ಪರವಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಅದಿಲ್ಲವೆಂದರೆ ಅಂಥ ಆರೋಪಗಳಿಗೆ ಜನ ಮನ್ನಣೆ, ಆದರೆ, ಗೌರವ ಕೊಡಬಾರದೆಂದು ಹೇಳುತ್ತೇನೆ.

ರಾಜ್ಯ ಸರ್ಕಾರದ ಬಗ್ಗೆ ತೆಗೆದುಕೊಂಡರೆ, ಕರ್ನಾಟಕದಲ್ಲಿ ೧೯೪೭ರಿಂದ ೧೯೫೬ರ ವರೆಗೆ ರಾಜ್ಯದ ಪುನರ್ವಿಂಗಡಣೆಯಾಗುವವರೆಗೆ ಪ್ರಮುಖ ಕೋಮು ಎಂದು ಹೇಳುವ ಲಿಂಗಾಯಿತ ಮತ್ತು ಒಕ್ಕಲಿಗರ ಪೈಕಿ ಒಕ್ಕಲಿಗರು ರಾಜ್ಯವಾಳಿದ್ದಾರೆ. ಈ ಸಂದರ್ಭದಲ್ಲಿ ಅಧಿಕಾರ ದುರುಪಯೋಗವಾಗಿದೆ ಅಥವಾ ಯಾವ ಯಾವ ರಂಗದಲ್ಲಿ ಯಾವ ಯಾವ ಜಾತಿ ಮುಂಚೆ ಇದ್ದುದಕ್ಕಿಂತ ಮುಂದೆ ಬಂದಿದ್ದಾರೆ ಎಂಬುದು ತನಿಖೆಯಾಗಬೇಕು. ಇಲ್ಲದಿದ್ದರೆ ಒಕ್ಕಲಿಗರು ಅಧಿಕಾರದಲ್ಲಿದ್ದುದರಿಂದ ಅವರನ್ನು ಬಿಟ್ಟರೆ ಉಳಿದ ಎಲ್ಲ ಜಾತಿಯವರೂ ಹಿನ್ನಲೆಯಾಗಿರಬೇಕು ಎಂದು ಅರ್ಥವಾಗುತ್ತದೆ. ಆಹೊತ್ತು ಲಿಂಗಾಯಿತರು ಅಧಿಕಾರದಲ್ಲಿ ಇರಲಿಲ್ಲ; ಆದ್ದರಿಂದ ಲಿಂಗಾಯಿತರ ಬೆಳವಣಿಗೆ ಕುಂಠಿತವಾಗಿರಬೇಕು. ಒಕ್ಕಲಿಗರೇ ಎಲ್ಲ ಅನುಕೂಲಗಳನ್ನೂ ಪಡೆದಿರುವುದಾದರೆ ಲಿಂಗಾಯಿತರ ಬೆಳವಣಿಗೆ ಕುಂಠಿತವಾಗಿರಬೇಕು. ಆಗಿನ ಮಂತ್ರಿಮಂಡಲದಲ್ಲಿ ಮಾನ್ಯ ಸಿದ್ದವೀರಪ್ಪನವರೂ ಇದ್ದರು.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಒಕ್ಕಲಿಗನಾಗಿ ಇದ್ದೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಿದ್ದವೀರಪ್ಪನವರೂ ನಮ್ಮನ್ನು ರಕ್ಷಣೆ ಮಾಡಿದ ಮೇಲೆ, ನಾವು ಹೆಚ್ಚು ಬೆಳೆದಿದ್ದೇವೆಂದಾಯಿತು.

SRI H. SIDDAVEERAPPA.—That was a period when communalism was unknown in Mysore State.

ಶ್ರೀ ಎಚ್.ಡಿ. ದೇವೇಗೌಡ.—ಅದನ್ನು ನಾನು ಇಲ್ಲ ಎಂದು ಹೇಳಲಿಲ್ಲ, ಈಗ ಯಾವ ಮೂಲೆಗೆ ಹೋಗಲಿ, ಯಾವ ಹೋಟಲಿನಲ್ಲಿ ಕುಳಿತುಕೊಳ್ಳಲಿ ಅದೇ ವಿಚಾರ ಬರುತ್ತದೆ.

ಮಾನ್ಯ ಕಾಗೋಡು ತಿಮ್ಮಪ್ಪನವರು ಆ ದಿನ ಓದಿದಂಥ ಅಂಕಿ ಅಂಶಗಳನ್ನೇ ನಾನೂ ಸ್ವಲ್ಪ ಓದುತ್ತೇನೆ : ಅವರು ಸ್ವಲ್ಪ ಭಾಗ ಮಾತ್ರ ಓದಿದರು. ಪೂರ್ತಿ ಓದಲಿಲ್ಲ. ಅವಕು ಬಹಳ ಜಾಣ್ಮೆಯಿಂದ ಓದಿದ್ದಾರೆ. ನಾನು ಅದನ್ನು ಪೂರ್ಣ ಮಾಡುತ್ತೇನೆ ೧೯೬೯ರಲ್ಲಿ ನಾಗನ ಗೌಡ ಕಮಿಟಿಯವರು ಕೊಟ್ಟಿರತಕ್ಕ ರಿಪೋರ್ಟನ್ನು ಶ್ರೀ ತಿಮ್ಮಪ್ಪನವರು ಕೋಟ್ ಮಾಡಿದರು. ಪ್ರಪೋರ್ಷನಲ್ ರೆಪ್ರೆಸೆಂಟೇಷನ್ ಸಿಕ್ಕಿದೆಯೋ ಎನ್ನುವುದರ ಬಗ್ಗೆ ಅವರೇ ಹೇಳಿದ್ದಾರೆ. ೧೯೬೯ರಲ್ಲಿ ಪ್ರಪೋರ್ಷನಲ್ ರೆಪ್ರೆಸೆಂಟೇಷನ್ ಜಾತಿಯ ಆಧಾರದ ಮೇಲೆ ತೆಗೆದುಕೊಂಡು ಅವರು ಹೇಳಿರುವ ಪ್ರಕಾರ ಹೀಗಿದೆ.—

ಲಿಂಗಾಯಿತರು ಅವರಿಗೆ ಬರಬೇಕಾಗಿದ್ದ ಪ್ರಾತಿನಿಧ್ಯಕ್ಕಿಂತ ೦.೭೪ ಪರ್ಸೆಂಟ್ ಕಡಮೆ ಪಡೆದಿದ್ದಾರೆ. ಇದು ನಾಲ್ಕನೇ ದರ್ಜೆ ಎಲ್ಲ ಸೇರಿಸಿ. ಅದೇ ರೀತಿ ಒಕ್ಕಲಿಗರು ೫.೦೩ ಪರ್ಸೆಂಟ್‌ನಷ್ಟು ಕಡಮೆ ಪಡೆದಿದ್ದಾರೆ. ಯಾವ ಯಾವ ಜಾತಿಯವರಿಗೆ ಅವರಿಗೆ ಸಿಕ್ಕಬೇಕಾದ ಪ್ರಾತಿನಿಧ್ಯದಲ್ಲಿ ಎಷ್ಟೆಷ್ಟು ಸಿಕ್ಕಿದೆ ಎನ್ನುವುದನ್ನೂ ಸಹ ಅವರೇ ಹೇಳಿದ್ದಾರೆ. ಆವರು ಒಕ್ಕಲಿಗರು ಮತ್ತು ಲಿಂಗಾಯಿತರಲ್ಲ. ಯಾವ ಆಧಾರದ ಮೇಲೆ ಅವರು ಹೇಳಿದ್ದಾರೆನ್ನುವುದು ಗೊತ್ತಿಲ್ಲ. ಇದು ಕಮಿಟಿಯ ವರದಿಯಲ್ಲಿರುವ

(ಶ್ರೀ ಹೆಚ್. ಡಿ. ದೇವೇಗೌಡ)

ವಿಚಾರ. ಬಣಜಿಗರನ್ನು ತೆಗೆದುಕೊಂಡರೆ ಅವರಿಗೆ ಪ್ರಪೋರ್ಷನಲ್ ರೆಪ್ರೆಸೆಂಟೇಷನ್ ಏನು ಸಿಕ್ಕ ಬೇಕಾಗಿತ್ತೋ ಅದಕ್ಕಿಂತ ೦. ೨೯ ಪರ್ಸೆಂಟ್ ಮುಂದೆ ಇದ್ದಾರೆ, ಬ್ರಾಹ್ಮಣರು ೧೯.೬೪ ಪರ್ಸೆಂಟ್‌ನಷ್ಟು ಕ್ಷತ್ರಿಯರು ೧.೦೩ ಪರ್ಸೆಂಟ್, ರಜಪೂತ್ ೦.೪ ಪರ್ಸೆಂಟ್, ನಾಯರ್ ೨.೧೪ ಪರ್ಸೆಂಟ್ ಕೊಡಗ ೧.೧೭ ಪರ್ಸೆಂಟ್. ಮುಸ್ಲಮರು, ೩.೫೧ ಪರ್ಸೆಂಟ್, ಕ್ರಿಶ್ಚಿಯನ್ನರು ೨.೬೭ ಪರ್ಸೆಂಟ್ ಹೀಗೆ ಪ್ರಪೋರ್ಷನಲ್ ರೆಪ್ರೆಸೆಂಟೇಷನ್ನಿಗಿಂತ ಮುಂದೆ ಹೋಗಿದ್ದಾರೆ. ೧೯೫೯ರಲ್ಲಿ ಒಕ್ಕಲಿಗರು ತಮಗೆ ಇರಬೇಕಾದ ಪ್ರಾತಿನಿಧ್ಯಕ್ಕಿಂತ ೫.೦೩ ಪರ್ಸೆಂಟ್‌ನಷ್ಟು ಕಡಮೆ ಪಡೆದಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ —ಇದು ಹತ್ತು ವರ್ಷ ಅಧಿಕಾರ ಮಾಡಿದ ಮೇಲೆ.

ಶ್ರೀ ಕಾಗೋಡು ತಿಮ್ಮಪ್ಪ.—೧೯೪೭ರ ವರೆಗೆ ಏನಿತ್ತು, ಅದಕ್ಕಿಂತ ಹೆಚ್ಚಾಗಿದೆ ಎಂದು ನಾನು ಹೇಳಿದ್ದೇನೆ. ೧೯೨೯ ರಿಂದೀಚೆಗೆ ಒಂದು ಕಾಲದಲ್ಲಿ ಸಂಪೂರ್ಣವಾಗಿ ಬ್ರಾಹ್ಮಣರು ಏನು ಅನುಭವಿಸು ತ್ತಿದ್ದರು, ಆ ನಂತರವಾದಂಥ ಚಳುವಳಿಯಿಂದ ಅವರಿಗೆ ಹೋಗತಕ್ಕ ಕೆಲವು ಭಾಗ ಕಡಮೆಯಾಗಿ ಇವೆರಡೂ ಜಾತಿಗಳಲ್ಲಿ ಅದು ಹಂಚಿಕೆಯಾಗಿದೆಯೆಂದು ಹೇಳಿದ್ದೇನೆ.

ಶ್ರೀ ಎಚ್.ಡಿ. ದೇವೇಗೌಡ.—ಅವರ ದೃಷ್ಟಿಕೋನದಲ್ಲಿ ಇವೆರಡೇ ಜಾತಿಗಳು ಇರುವುದು. ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನೂ ನಾನು ಓದಿದ್ದೇನೆ. They come under the category of minorities ಎಂದು ಹೇಳಿದರೆ ಕಷ್ಟವಾಗುತ್ತದೆ We must be excluded ಅಷ್ಟೇ ನಿಮ್ಮನ್ನು ಹೇಗೆ ತೆಗೆಯಬೇಕು ಎಂದು ಅವರು ಕೇಳಿದರು. ಅವರ ವಾದವನ್ನು ಸಮರ್ಥನೆ ಮಾಡಿಕೊಳ್ಳಬೇಕಾದರೆ ಅವರು ಹೀಗೆ ಹೇಳಿರಬಹುದು. ಅದಿಲ್ಲದಿದ್ದರೆ ಆಗುವುದಿಲ್ಲ. ಇವೊತ್ತು ಇರುವುದು ವೋಟು ಮತ್ತು ಸೀಟು. ಇವೆರಡನ್ನೂ ಈ ಕಂಪನಿಗಳು ಮುಂದುವರಿಸಿಕೊಂಡು ಹೋದವು ಎಂದರು. ಇದನ್ನು ಇಷ್ಟಕ್ಕೆ ಬಿಟ್ಟರೆ ಏನಾದರೂ ಹೇಳಬಹು ದಾಗಿತ್ತು. ಆದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿ ಇದನ್ನು ಓದುವಾಗ ಏನನ್ನು ಬಿಟ್ಟರೂ ಅದನ್ನು ಪೂರ್ತಿಯಾಗಿ ಇದರಲ್ಲಿ ಓದುತ್ತಿದ್ದೇನೆ. This is the information supplied by the Library.

12—30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿರುವ ವಿವರಗಳನ್ನೇ ನಾನು ಹೇಳಿರುವುದು. The Hon'ble Leader of the Opposition can compare it.

ಶ್ರೀ ಎಚ್.ಡಿ. ದೇವೇಗೌಡ.—ಇದರಲ್ಲಿರುವ ಕೊನೆಯ ರಿಮಾರ್ಕ್ಸ್ ಕಲಂನ್ನು ಅವರು ಇಲ್ಲಿ ಓದಲೇ ಇಲ್ಲ. ಪ್ರಪೋರ್ಷನಲ್ ರೆಪ್ರೆಸಂಟೇಷನ್ ಎಷ್ಟು ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಮಾತ್ರ ಇಲ್ಲಿ ಹೇಳಿದರು. ಇದು ಹೇಗಿದೆ ಎಂದರೆ ಲಾಯರುಗಳು ಅರಗ್ಯುಮೆಂಟ್ ಮಾಡುವಾಗ ಅವರ ಕೇಸಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಓದಿ ಹೇಳಿದರೆ ಆಗ ಅವರ ಕೇಸನ್ನು ಗೆಲ್ಲಲು ಅನುಕೂಲ ವಾಗುತ್ತದೆ. ಆ ರೀತಿಯಾಗಿ ಇಲ್ಲಿ ಅವರು ವಾದ ಮಾಡಿದರು. ಅವರೂ ಲಾಯರಾಗಿರುವುದರಿಂದ ಬಹಳ ಚಮತ್ಕಾರವಾಗಿ ಇದರ ಬಗ್ಗೆ ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಆ ವಾದವನ್ನು ಪೂರ್ತಿಮಾಡಿ. The Hon'ble Leader of the Opposoosition may pleace draw his conclusion.

ಶ್ರೀ ಎಚ್.ಡಿ. ದೇವೇಗೌಡ.—ನನಗೂ ಗೊತ್ತಿದೆ ಸರಕಾರ ಇಲ್ಲಿ ಹೊರಡಿಸಿರುವ ಪಟ್ಟಿಯಲ್ಲಿ ಬೇರೆ ವಿಚಾರಗಳಲ್ಲೂ ವಿಚಾರ ಮಾಡಿ ಹೇಳಿದ್ದಾರೆ. I cannot tell that. The Hon'ble member can draw his conclusion.

ಶ್ರೀ ಕಾಗೋಡು ತಿಮ್ಮಪ್ಪ.—೧೯೪೭ರಿಂದೀಚೆಗೆ ಯಾವ ರೀತಿ ಇತ್ತು, ಎಂತೆಂತಹವರು ಅಧಿಕಾರ ದಲ್ಲಿ ಇದ್ದರು ಎನ್ನುವ ಬಗ್ಗೆ ತಾವು ಹೇಳಬೇಕು

ಶ್ರೀ ಎಚ್.ಡಿ. ದೇವೇಗೌಡ.—ಇಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಬೇರೆ ಜಾತಿಗಳಿಗೆ ಎಷ್ಟು ಪ್ರಪೋರ್ಷನಲ್ ರೆಪ್ರಸಂಟೇಷನ್ ಪ್ರಕಾರ ಕೊಡಲಾಗಿದೆ ಹಿಂದೆ ಎಷ್ಟು ಸಿಕ್ಕಿದೆ ಹೀಗೆ ಇದರ ವಿವರ ಗಳನ್ನೆಲ್ಲಾ ಕೊಟ್ಟಿದ್ದಾರೆ. This is only pertaining to the appointments.

SRI KAGODU THIMMAPPA.—The Hon'ble Leader of the Oppositin is drawing a very narrow conclusion.

ಶ್ರೀ ಎಚ್.ಡಿ. ದೇವೇಗೌಡ.—ಕೈಗಾರಿಕೆಗಳಲ್ಲಿ ಆವತ್ತಿನ ದಿವಸ ಯಾವ ತರಹದಲ್ಲಿತ್ತು ಎನ್ನುವ ಅಂಕಿ ಅಂಶಗಳಿಲ್ಲ. ಬೆಂಗಳೂರಿನಲ್ಲೇ ಇರುವ ಕೈಗಾರಿಕೆಗಳಲ್ಲಿ ಒಕ್ಕಲಿಗರ ಅಥವಾ ಲಿಂಗಾಯಿತರ ಶೇಕಡಾವಾರು ಎಷ್ಟು ಎನ್ನುವುದು ಇಲ್ಲಿಲ್ಲ. ನನಗೆ ತಿಳಿದಿರುವ ಹಾಗೆ ಒಕ್ಕಲಿಗರು ಯಾರೂ ಕೈಗಾರಿಕೆ ಗಳನ್ನು ಇಲ್ಲಿ ನಡೆಸುತ್ತಿಲ್ಲ. ಇದರ ಬಗ್ಗೆ ಮಾನ್ಯ ಶ್ರೀ ಹುಚ್ಚಮಾಸ್ತಿ ಗೌಡರೇ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇದರ ಲೆಕ್ಕವನ್ನು ಯಾರೂ ಮಾಡಿಲ್ಲ. ಮುಂದೆ ಬೇಕಾದರೆ ಮಾಡೋಣ. ನನಗಿಂತ ತಮಗೆ ಹೆಚ್ಚು ಗೊತ್ತಿದೆ. ತಮಗೆ ಗೊತ್ತಿರುವ ಹಾಗೆ, ನನಗೆ ಯೋಗ್ಯತೆ ಇರುವುದು ವ್ಯವಸಾಯ ಕ್ಷೇತ್ರ ಒಂದೇ.

ಶ್ರೀ ಹೆಚ್.ಡಿ. ದೇವೇಗೌಡ.—ಹಿಂದೆ ಒಂದು ಕಾಲ ಇತ್ತು. ಈಗ ಇವರ ಕಾಲದಲ್ಲಿ ಇವರು ಇದನ್ನು ಮುಗಿಸಿಬಿಟ್ಟಿದ್ದಾರೆ. ಸೀಲಿಂಗ್ ಲಿಮಿಟ್ ಎಂದು ಮಾಡಿ ಹತ್ತು ಎಕರೆ ಎಂದು ನಿಗದಿ ಮಾಡಿದ್ದಾರೆ ಇದು ಹಿಂದಿನ ಕಾಲಕ್ಕೆ ಸರಿಯಾಗಿತ್ತು. ಈಗಿನ ಕಾಲದಲ್ಲಿ ಹತ್ತು ಎಕರೆ ಇಟ್ಟು ಕೊಂಡಿರುವವರು ಕೂಡ ಬಂದವರಿಗೆ ಗಂಜಿ ಕಾಯಿಸಿ ಕೊಡಲು ಆಗುತ್ತಿಲ್ಲ. ಅಂತಹ ಒಂದು ಕಷ್ಟವಾದ ಸ್ಥಿತಿಯಲ್ಲಿ ನಮ್ಮ ರೈತರಿದ್ದಾರೆ. ಹತ್ತು ಎಕರೆ ಎಂದು ನಿರ್ಣಯ ಮಾಡಿರುವುದು ತುಂಬಾ ವ್ಯಸನ ಕರವಾದ ಒಂದು ನಿರ್ಣಯ. ಇಂದೇನೋ ಆಗಿದೆ. ಮುಂದೆ ಏನಾಗುತ್ತದೆಂಬುದನ್ನು ನೋಡೋಣ. ಇಲ್ಲಿ ಕಷ್ಟಗಳೇನು ಎನ್ನುವುದನ್ನು ಯಾರೂ ಸರಿಯಾಗಿ ಪರಿಶೀಲಿಸಲಿಲ್ಲ. ವ್ಯವಸಾಯವನ್ನು ಬರೀ ಒಕ್ಕಲಿಗರೇ ಮಾಡುತ್ತಿಲ್ಲ. ತಾವು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲೂ ಕೂಡ ಲ್ಯಾಂಡ್ ರಿಫಾರಂಸ್ ಜಾರಿಗೆ ತಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಕೆ ತೋಟ ಮಾಡುತ್ತಿರುವವರು ಒಕ್ಕಲಿಗರಲ್ಲ. ಬ್ರಾಹ್ಮಣರು, ಇಂದು ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ವ್ಯವಸಾಯದಲ್ಲಿ ಒಕ್ಕಲಿಗರು ವ್ಯವಸಾಯ ಮಾಡುವಂತೆ, ಲಿಂಗಾಯಿತರೂ, ವ್ಯವಸಾಯ ಮಾಡುತ್ತಾರೆ ಅದರಂತೆ ಬ್ರಾಹ್ಮಣರೂ ವ್ಯವಸಾಯ ಮಾಡುತ್ತಿದ್ದಾರೆ. ಇದರಲ್ಲೇನಾಗಿದೆ ಎಂದರೆ ಪ್ರಕೃತ ಹೆಸರು ಹಾಳಾಗುತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ತೀರಾ ನಗ್ನ ಸತ್ಯವನ್ನು ಮಾತನಾಡುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನ ಮಾಡಿದ್ದಾರೆ. ಆದರೆ ಸತ್ಯವಾದ ಮಾತುಗಳೂ ಕೆಲವು ವೇಳೆ ಅಪ್ರಿಯವಾಗಿ, ಅನಾಹುತಗಳಾಗುವ ಸಂದರ್ಭಕ್ಕೆ ಇದು ಎಡೆ ಕೊಡುತ್ತದೆ ಎಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳುವುದರಲ್ಲಿ ಸತ್ಯವಿದೆ. ಸತ್ಯ ಯಾವಾಗಲೂ ಕಠಿಣ. ಇದನ್ನು ಎದುರಿಸಬೇಕಾದರೆ ಸ್ವಲ್ಪ ಮನೋದಾರ್ಢ್ಯ ಬೇಕಾಗುತ್ತದೆ ಮತ್ತು ಧೈರ್ಯ ಬೇಕಾಗುತ್ತದೆ.

ಶ್ರೀ ಹಚ್.ಡಿ. ದೇವೇಗೌಡ.—ನೀವು ಕೊಟ್ಟಂತಹ ನಿರ್ದೇಶನಗಳನ್ನು ನಾನೂ ಒಪ್ಪುತ್ತೇನೆ. ನೀವು ಕೊಟ್ಟಿರತಕ್ಕಂತಹ ನಿದರ್ಶನಗಳು ನಿಜಕ್ಕೂ ನೀವು ಶಿರಸಾವಹಿಸಿ ನಡೆಸಿಕೊಂಡು ಹೋಗುವುದು ಒಳ್ಳೆಯದು. ನಾವು ಅಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ ಇಂತಹ ಒಂದು ವಾತವರಣವನ್ನು ನಿರ್ಮಾಣ ಮಾಡದೆ ಕೇವಲ ವೋಟು ಮತ್ತು ಸೀಟಿಗಾಗಿ ಹೋರಾಡುತ್ತಿರುವು ದರಿಂದ ಈ ವಾತಾವರಣ ನಿರ್ಮಾಣವಾಗಿದೆ. ಕರ್ನಾಟಕ ರಾಜ್ಯದಲ್ಲಾಗಿರತಕ್ಕ ಅನಾಹುತಗಳನ್ನು ತಪ್ಪಿಸಬೇಕಾದರೆ ತಾವು ಹೇಳುವಂತೆ ಎಲ್ಲರೂ ಅನುಸರಿಸಿಕೊಂಡು ಹೋಗಬೇಕಾಗಿದೆ. ಆ ರೀತಿ ಜನತೆಯನ್ನು ನೋಡಿಕೊಂಡರೆ ಒಳ್ಳೆಯದು. ನಾನು ಇದಕ್ಕೆ ನನ್ನ ಸಂಪೂರ್ಣ ಸಹಕಾರವನ್ನು ಕೊಡಲು ಸಿದ್ಧನಾಗಿದ್ದೇನೆ. ಅವರು ಇನ್ನು ಒಂದು ಮಾತು ಹೇಳಿದರು. ಏನೆಂದರೆ ಕರ್ನಾಟಕ ರಾಜ್ಯಕ್ಕೆ ಹಿಂದೆ ನಿಜಲಿಂಗಪ್ಪನವರು ಏನು ಮಾಡಿದರು ಎಂದು. ಆದರೆ ಹೈಕೋರ್ಟು ಜಡ್ಜ್‌ಗಳ ಹಾಗೂ ಡಿಸ್ಟ್ರಿಕ್ಟ್ ಜಡ್ಜ್‌ಗಳ ನೇಮಕ ಮಾಡುವಾಗ ಶ್ರೀ ಹನುಮಂತಯ್ಯನವರು ಏನು ಮಾಡಿದರು ಎಂದು ಹೇಳದೆ ಹಾಗೇ ಬಿಟ್ಟರು. ಹನುಮಂತಯ್ಯನವರು ಮೆಂಜಾರಿಟಿ ಕಮಿಟಿಯವರು ಎಂತೇನೋ ಇರಬಹುದು. ಅದರ ವಿಚಾರ ಈಗ ಬೇಡ. ಅವರೇ ಹಿಂದುಳಿದ ವರ್ಗದವರೊಬ್ಬರನ್ನು

ಡಿಸ್ಟ್ರಿಕ್ಟ್ ಜಡ್ಜ್ ಆಗಿ ನೇಮಕ ಮಾಡಲು ಶಿಫಾರಸು ಮಾಡಿದ್ದರು. ಅವರೇನೂ ಮೆಜಾರಿಟಿ ಪಾರ್ಟಿಯವರಲ್ಲ. ಶ್ರೀ ಪೊನ್ನುರಂಗಂ ಎನ್ನುವವರು ಹರಿಜನರಾಗಿದ್ದರು. ಅವರಿಗೆ ಪ್ರಮೋಷನ್ ಕೊಡಬೇಕೆಂದು ಆಗಿದ್ದ ಸರಕಾರ ತೀರ್ಮಾನ ಮಾಡಿತ್ತು. ಆಗ ನಮ್ಮ ಸರಕಾರ ಇತ್ತೋ ಅಥವಾ ನಿಮ್ಮ ಸರಕಾರ ಇತ್ತೋ ಅದು ಬೇಕಿಲ್ಲ. ಹಿಂದೆ ಇದ್ದ ಸರಕಾರ ಮಾಡಿದಂದನ್ನು ನಿಮ್ಮ ಸರಕಾರ ಬಂದು ಪೊನ್ನುರಂಗಂ ಅಂಡ್ ಕಂಪನಿಯವರನ್ನು ಏತಕ್ಕಾಗಿ ತೆಗೆದುಹಾಕಲು ಹೋದರು ? ಅವರಿಗೆ ನೀವು ರಕ್ಷಣೆ ಕೊಡಬಹುದಾಗಿತ್ತು ?

ಶ್ರೀ ಎನ್. ರಾಚಯ್ಯ.—ಹರಿಜನರನ್ನೇ ತೀವ್ರವಾಗಿ ಮುಂದಕ್ಕೆ ತೆಗೆದುಕೊಂಡು ಬರಬೇಕೆಂದಿದ್ದ ಪಕ್ಷದಲ್ಲಿ ಅಂತಹವರನ್ನೇ ದೇಶದ ಪ್ರಧಾನಿಗಳಾಗಿ ತೆಗೆದುಕೊಂಡು ಬಂದಿದ್ದರೂ ಸಹ ಯಾರೂ ಅದನ್ನು ತಪ್ಪಿಸಲಾಗುತ್ತಿರಲಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಿಮ್ಮ ಮನಸ್ಸಿನಲ್ಲಿ ಇಂತಹ ಭಾವನೆ ಬಂದಿರುವುದು ಒಳ್ಳೆಯದು. ಇಲ್ಲಿಯವರಿಗೆ ಬೇರೆಯವರೂ ಯಾರೂ ಹರಿಜನರಿಗೆ ಸಹಾಯ ಮಾಡಲಿಲ್ಲವೇ ? ಇಂತಹ ಒಂದು ಭಾವನೆ ನಿಮ್ಮಲ್ಲಿ ಬೆಳೆಯುತ್ತಿರುವುದನ್ನು ನೋಡಿದರೆ ಹರಿಜನರನ್ನು ನಿರ್ಲಕ್ಷಿಸಿದ್ದಾರೆಂದಾಯಿತಾ.

ಶ್ರೀ ಎನ್. ರಾಚಯ್ಯ.—ಹಿಂದೆ ಇದೇ ರಾಜ್ಯದಲ್ಲಿ ಶ್ರೀಮಾನ್ ಗೋಪಾಲಸ್ವಾಮಿ ಅಯ್ಯಂಗಾರ್ ರವರು, ಶ್ರೀ ಸಿ. ಆರ್. ರೆಡ್ಡಿಯವರು ಹಾಗೂ ಕೆ.ಹೆಚ್. ರಾಮಯ್ಯ ಅವರಿಗೆ ಗಳಿಗಿರಲ್ಲಿದ್ದ ಮನೋಭಾವ ಬ್ರಾಹ್ಮಣರಿಗೆ, ಲಿಂಗಾಯಿತರಿಗೆ ಹಾಗೂ ಒಕ್ಕಲಿಗರಿಗೆ ಇದ್ದಿದ್ದರೆ ಸಂವಿಧಾನಕ್ಕೆ ದ್ರೋಹವಾಗುತ್ತಿರಲಿಲ್ಲ. ಹರಿಜನರಿಗೆ ರಾಜ್ಯಾಂಗಬದ್ಧವಾಗಿ ನ್ಯಾಯ ದೊರಕಿಲ್ಲ ಎಂದು ಇಂದು ಹರಿಜನರಿಗೆ ಸರಿಯಾದ ನ್ಯಾಯವನ್ನು ದೊರಕಿಸಿಕೊಡಿ ಎಂದು ಕೇಳುತ್ತಿರುವುದು.

ಶ್ರೀ ಕೆ. ಎಸ್. ಪಾಟೀಲ್ —ಮಾನ್ಯ ರಾಚಯ್ಯನವರು ಹೇಳುವ ಕಾಲಕ್ಕೆ ಅವರು ಮಂತ್ರಿಗಳಾಗಿದ್ದರು ಹಾಗೂ ನಾನೂ ಮಂತ್ರಿಯಾಗಿದ್ದೆ. ವ್ಯವಸಾಯ ಒಂದು ಮುಖ್ಯವಾದ ಖಾತೆ. ಹರಿಜನರಿಗೆ ಪ್ರಾತಿನಿಧ್ಯ ಇಲ್ಲ ಎಂದು ಆಗ ಅವರು ಹೇಳಿದಾಗ ನಾನೇ ಆ ಖಾತೆಯನ್ನು ಮಾನ್ಯ ಶ್ರೀ ರಾಚಯ್ಯನವರಿಗೆ ಬಿಟ್ಟುಕೊಟ್ಟೆ. ಅದರ ಅವರ ಜ್ಞಾಪಕದಲ್ಲಿರಬೇಕು. ಆದರೆ ಈಗ ಈ ರೀತಿ ಸಾರ್ವತ್ರಿಕವಾಗಿ ಹೇಳಬಾರದು. ಈ ರೀತಿ ಸ್ವೀಪಿಂಗ್ ರಿಮಾರ್ಕ್ಸ್ ಮಾಡಬಾರದು,

ಶ್ರೀ ಎನ್. ರಾಚಯ್ಯ —ಜ್ಞಾಪಕದಲ್ಲಿದೆ. ಏನೂ ಮಾಡಲಿಲ್ಲ ಎಂದು ಹೇಳಲಿಲ್ಲ. ಆದರೆ ಮಾಡಬೇಕಾದಷ್ಟನ್ನು ಆಗ ಮಾಡಲಿಲ್ಲ,

ಶ್ರೀ ಹೆಚ್.ಡಿ. ದೇವೇಗೌಡ.—ಇದನ್ನು ಅವರ ಅನುಭವದ ಮೇಲೆ ಹೇಳುತ್ತಿದ್ದಾರೆ. ಇದು ಬಹು ಕಠಿಣ. ಆದರೆ ಗಳಿಗಿರಿಂದೀಚೆಗೆ ಬಂದಿರತಕ್ಕ ನವ ಬ್ರಾಹ್ಮಣರು ಎಂದು ಹೇಳತಕ್ಕ ಒಂದು ವರ್ಗಕ್ಕೆ ಏನು ಮಾಡಿದ್ದಾರೆ ಎನ್ನುವುದನ್ನು ನೀವು ಮರೆತುಬಿಟ್ಟಿರಿ. ಇದು ಸೌಜನ್ಯತೆಗೆ ಮೀರಿದಂತಹ ಮಾತುಗಳು.

ಶ್ರೀ ಎನ್. ರಾಚಯ್ಯ.—ರಾಜ್ಯದಲ್ಲಿರುವ ರಾಜ್ಯಾಂಗಕ್ಕೆ ಸರಿಯಾದ ಪ್ರಾಶಸ್ತ್ಯವನ್ನು ಕೊಡಲಿಲ್ಲ. ರಾಜ್ಯಾಂಗದಂತೆ ರಕ್ಷಣೆ ಕೊಟ್ಟಿದ್ದರೆ ಯಾರೂ ಅದನ್ನು ಇಲ್ಲಿ ಹೇಳುತ್ತಿರಲಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಕೆಲಸಗಳೇನೂ ನಡೆದಿಲ್ಲ ಎಂದು ತಾವು ಹೇಳಬಾರದು. ಆಡಳಿತ ನಿಮ್ಮ ಕೈಯಲ್ಲೇ ಇದೆಯಲ್ಲಾ ?

ಶ್ರೀ ಎನ್. ರಾಚಯ್ಯ.—ನೂರಕ್ಕೆ ತೊಂಬತ್ತು ಭಾಗ ನಮ್ಮ ಜನ ಸಂಖ್ಯೆಯ ಪ್ರಾತಿನಿಧ್ಯಕ್ಕನುಸಾರವಾಗಿ ಇಂದು ಇರುವ ಕರ್ನಾಟಕ ಲೆಜಿಸ್ಲೇಚರಿನಲ್ಲಿ ಹಾಗೂ ಇತರ ಕಡೆಗಳಲ್ಲಿ ಸಾಕಾದಷ್ಟು ಪ್ರಾತಿನಿಧ್ಯವನ್ನು ಕೊಟ್ಟಿಲ್ಲ ಎಂದರೆ ಅದು ತಪ್ಪೇ ?

ಶ್ರೀ ಹೆಚ್.ಡಿ. ದೇವೇಗೌಡ. —ಮಾಡಿರುವುದು ಸಮಾಧಾನಕರವಾಗಿಲ್ಲ ಎಂದು ಹೇಳಿದರೆ ಅದರಲ್ಲಿ ಅರ್ಥವಿದೆ. ಏನೂ ಮಾಡಲಿಲ್ಲ ಎಂದರೆ ಗಳಿಗಿನೇ ಇಷವಿಯಿಂದಲೇ ಕೈಬಿಟ್ಟರು ಎಂದು ಏಕೆ ಹೇಳಲಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ನಮಗೆ ಯಾರ ದಾನ ಹಾಗೂ ಧರ್ಮ ಬೇಕಾಗಿಲ್ಲ. ಕೊಡಬೇಕಾಗಿರುವುದನ್ನು ಕಾನ್‌ಸ್ಟಿಟ್ಯೂಷನ್ ಪ್ರಕಾರ ಕೊಟ್ಟರೆ ಸಾಕು.

ಶ್ರೀ ಹೆಚ್. ಡಿ. ದೇವೇಗೌಡ.—ಕಾನ್‌ಸ್ಟಿಟ್ಯೂಷನ್‌ನಲ್ಲಿ ಸರಿಯಾಗಿ ಮಾಡಿದ್ದಾರೆ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಸಮಾಜದ ಎಲ್ಲಾ ವರ್ಗದ ಜನರಿಗೂ ಬೆಂಬಲ ಕೊಟ್ಟಿದ್ದಾರೆ. ಕಾನ್‌ಸ್ಟಿಟ್ಯೂಷನ್ ಬರೆಯಲಿಕ್ಕೆ ಎಲ್ಲರೂ ಕಾರಣರು ; ಬರೀ ಒಬ್ಬರೇ ಬರೆದುಕೊಂಡರೆ ಅದಕ್ಕೆ ಬೆಲೆ ಬರುವುದಿಲ್ಲ.

ಶ್ರೀ ಎನ್. ರಾಚಯ್ಯ.—ಎಲ್ಲಾ ವರ್ಗದವರೂ ಕಾನ್‌ಸ್ಟಿಟ್ಯೂಷನ್ ಬರೆದರೆ, ಕೆಲವೊಂದು ವರ್ಗದ ಜನರು ಅಧಿಕಾರದಲ್ಲಿ ಇದ್ದುಕೊಂಡು ಬೇರೆಯವರಿಗೆ ಅನ್ಯಾಯ ಮಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀ ಕಾಗೋಡು ತಿಮ್ಮಪ್ಪನವರು ಎಲ್ಲಾ ಒಕ್ಕಲಿಗರಿಗೆ ಮತ್ತು ಲಿಂಗಾಯಿತರಿಗೆ ಅನುಕೂಲವಾಗುತ್ತಿದೆ ಎಂದು ಹೇಳುತ್ತಾರೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಯಾರು ಜಮೀನು ದಾನ ಕೊಟ್ಟಿಲ್ಲ ; ಯಾರು ಸಂಪಾದನೆ ಮಾಡಿದ್ದಾರೆ ಅದನ್ನು ಅವರಿಂದ ಸರಕಾರದವರು ಕಿತ್ತುಕೊಂಡು ಕೋಟಿಗಟ್ಟಲೆ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ಹರಿಜನರಿಗೆ ಮತ್ತು ಬೇರೆ ಕಮ್ಯೂನಿಟಿಗಳಿಗೆ ಕೊಟ್ಟು ಸಹಾಯ ಮಾಡುತ್ತಿದ್ದಾರೆ. ಅಂಥ ಭೂಮಿ ಹಂಚುವಾಗ ೫೦ ಪರ್ಸೆಂಟ್ ಭೂಮಿಯನ್ನು ಹರಿಜನರಿಗೆ ರಿಜರ್ವೇಶನ್ ಮಾಡಿರತಕ್ಕ ಕಾರ್ಯವನ್ನು ಈ ಸರಕಾರ ಮಾಡಿದೆ. ಆದರೂ ಸಹ ಯಾರು ಏನು ಮಾಡಿದ್ದಾರೆ ಎಂದು ಕೇಳುತ್ತಾ ಹೋದರೆ, ಘರ್ಷಣೆ ಪ್ರಾರಂಭವಾಗುತ್ತದೆ. ೮೦ ಪರ್ಸೆಂಟ್ ಇರತಕ್ಕ ವ್ಯವಸಾಯಗಾರರ ಪೈಕಿ ಭೂಸುಧಾರಣೆ ಜಾರಿಗೆ ಬರುವ ಸಮಯದಲ್ಲಿ ೫೦ ಪರ್ಸೆಂಟ್ ಹರಿಜನ ಮುಂತಾದವರಿಗೆ ಕೊಡಬೇಕೆಂದು ಮಾಡಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಕರ್ನಾಟಕದಲ್ಲಿ ಎಲ್ಲಾ ಪರಿಪಕ್ವವಾಗಿ ನಡೆದಿದೆ ಎಂದು ಹೇಳಲಿಲ್ಲ. ಆದರೆ, ಏನೂ ನಡೆದಿಲ್ಲ ಎಂದು ಆರೋಪಣೆ ಮಾಡುವುದು ಸೌಜನ್ಯಕ್ಕೆ ಬಹಳ ದೂರವಾದ ಮಾತು ಎಂದು ಹೇಳುತ್ತೇನೆ. ಬೇಕಾದರೆ ಅಂಕಿ-ಅಂಶಗಳನ್ನು ಕೊಡುತ್ತೇನೆ. ನಮ್ಮ ರಾಜ್ಯದಲ್ಲಿ ಏನು ಏನು ನಡೆದಿದೆ ಎಂಬುದನ್ನು ಬೇರೆ ರಾಜ್ಯಗಳೊಡನೆ ಹೋಲಿಸಿಕೊಳ್ಳೋಣ. ೧೯೪೭ರಿಂದೀಚೆಗೆ ಮುಂಚೂಣಿಯಲ್ಲಿದ್ದ ಒಕ್ಕಲಿಗರು ಮತ್ತು ಲಿಂಗಾಯಿತರು ಎಲ್ಲಾ ಭಾಗ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದರು ಎಂದು ಹೇಳಿದರು. ಅದನ್ನೇ ಕೋಟ್ ಮಾಡುತ್ತಿದ್ದೇನೆ. ಕರ್ನಾಟಕದಲ್ಲಿ ೧೮ ಪರ್ಸೆಂಟ್ ಎಂದು ಒಂದನ್ನೇ ಹಿಡಿದುಕೊಂಡಿರಿ. ಬ್ಯಾಕ್‌ವರ್ಡ್ ಕ್ಲಾಸುಗಳ ಭಾಗ ಎಷ್ಟು ಎಂದು ತಾವು ನೋಡಬೇಕು. ೧೯೪೭ರಿಂದ ೧೯೭೧ರ ವರೆಗೆ ಯಾವ ಯಾವ ರಾಜ್ಯಗಳಲ್ಲಿ ಯಾವ ಯಾವ ಜನಾಂಗದ್ದು ಎಷ್ಟೆಷ್ಟು ಪ್ರಗತಿ ಸಾಧನೆಯಾಗಿದೆ ಎನ್ನುವುದನ್ನು ಸ್ವಲ್ಪ ನೋಡೋಣ. ಹೀಗೆ ನೋಡಿದಾಗ, ಬೇರೆ ರಾಜ್ಯಕ್ಕಿಂತ ಕರ್ನಾಟಕದಲ್ಲಿ ಸ್ವಲ್ಪ ಉತ್ತಮ ಕೆಲಸವಾಗಿದೆ. ಉದಾಹರಣೆಗೆ, ಉತ್ತರ ಪ್ರದೇಶ, ಬಿಹಾರ ರಾಜ್ಯಗಳನ್ನು ಕೋಟ್ ಮಾಡುತ್ತೇನೆ. ಇವುಗಳ ಜೊತೆಯಲ್ಲಿ ಕರ್ನಾಟಕ ರಾಜ್ಯವನ್ನೂ ಹೋಲಿಕೆ ಮಾಡೋಣ. ೧೯೪೭ರಿಂದ ಉತ್ತರ ಪ್ರದೇಶದಿಂದ ರಾಷ್ಟ್ರದ ಪ್ರಧಾನಿಗಳು ಆರಿಸಿ ಬಂದಿದ್ದಾರೆ. ಈಗಿರುವ ಪ್ರಧಾನ ಮಂತ್ರಿಗಳೂ ಆ ರಾಜ್ಯಕ್ಕೇ ಸೇರಿದವರು. ಆ ರಾಜ್ಯದಲ್ಲಿ ಒಕ್ಕಲಿಗರು ಮತ್ತು ಲಿಂಗಾಯಿತರು ಏನೂ ಇಲ್ಲ. ಆ ರಾಜ್ಯದಲ್ಲಿ ಸಿ. ಬಿ. ಗುಪ್ತ ಅವರು ಕೆಲವು ಕಾಲ ಮುಖ್ಯಮಂತ್ರಿಗಳಾಗಿದ್ದರು. ಅವರು ವೈಶ್ಯರು ಅಂತ ಕಾಣುತ್ತದೆ. ಚರಣಸಿಂಗ್ ಅವರು ಜಾತ್ ಪಂಗಡಕ್ಕೆ ಸೇರಿದವರು. ಅವರ ಆಡಳಿತ ಒಂದು ವರ್ಷ ೬ ತಿಂಗಳು ಮಾತ್ರ ಇತ್ತು. ಅದು ಬಿಟ್ಟರೆ, ಬಾಕಿ ಕಾಲದಲ್ಲಿ ಈಗಿನ ಪ್ರಧಾನ ಮಂತ್ರಿಯವರ ಸಮಾಜಕ್ಕೇ ಸೇರಿದವರೇ ಮುಖ್ಯಮಂತ್ರಿಗಳಾಗಿದ್ದರು ಎಂದು ನನ್ನ ಅಭಿಪ್ರಾಯ. ಕಳೆದ ೨೫ ವರ್ಷಗಳಲ್ಲಿ ಮೂರೂವರೆ ವರ್ಷಗಳನ್ನು ಬಿಟ್ಟರೆ, ಉಳಿದ ಎಲ್ಲಾ ಕಾಲ ಉತ್ತರ ಪ್ರದೇಶದಲ್ಲಿ ಪ್ರಧಾನ ಮಂತ್ರಿಗಳಿಂದ ಹಿಡಿದು, ಮುಖ್ಯಮಂತ್ರಿಗಳ ತನಕ ಅವರ ಕಡೆಯವರೇ ಇದ್ದರು. ಬಿಹಾರ್ ರಾಷ್ಟ್ರದ ಹಿರಿಯ ವ್ಯಕ್ತಿಗಳಾದ ಶ್ರೀ ಜಗಜೀವನರಾಂ, ಅವರು ಹರಿಜನ ಕಲ್ಯಾಣಕೋಸ್ಕರ ಶ್ರಮಿಸಿದಂಥ ಹಿರಿಯ ನಾಯಕರು. ಅಲ್ಲಿ ಏನು ನಡೆದಿದೆ ಎಂದು ವಿವರಣೆ ಕೊಟ್ಟರೆ, ಕರ್ನಾಟಕದಲ್ಲಿ ಎರಡು ಜಾತಿಯವರು ಏನು ನುಂಗಿದ್ದಾರೆ ಎಂದು ಹೇಳಿದರೆ ಶ್ರೀ ಕಾಗೋಡು ತಿಮ್ಮಪ್ಪನವರು ಏನು ಆರೋಪಣೆ ಮಾಡಿದ್ದಾರೆ ಅದಕ್ಕೆ ಉತ್ತರ ಹೇಳಿದಂತಾಗುತ್ತದೆ. ಇಲ್ಲದಿದ್ದರೆ ಅವರಿಗೆ ಸಮಾಧಾನ ಮಾಡುವುದು ಕಷ್ಟವಾಗುತ್ತದೆ. ಅಲ್ಲಿ ಮೆಡಿಕಲ್ ಕಾಲೇಜ್ ಸೀಟುಗಳನ್ನು ಕೊಟ್ಟ ಬಗ್ಗೆ ಹೇಳುತ್ತೇನೆ. ಬಿಹಾರದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ೫ ಪರ್ಸೆಂಟ್, ಕರ್ನಾಟಕದಲ್ಲಿ ೧೫ ಪರ್ಸೆಂಟ್, ಬಿಹಾರದಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ೭ ಪರ್ಸೆಂಟ್, ಕರ್ನಾಟಕದಲ್ಲಿ ೩ ಪರ್ಸೆಂಟ್; ಉತ್ತರ ಪ್ರದೇಶದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ೩ ಪರ್ಸೆಂಟ್.

ಶ್ರೀ ಕಾಗೋಡು ತಿಮ್ಮಪ್ಪ.—ಹೆಚ್ಚಿಗೆ ಯಾರಿಗೆ ಹೋಗಿದೆ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.— ಉತ್ತರ ಪ್ರದೇಶದಲ್ಲೆಲ್ಲ ಷೆಡ್ಯೂಲ್ಡ್ ಕ್ಯಾಸ್ಟ್ ೩ ಪರ್ಸೆಂಟ್, ಷೆಡ್ಯೂಲ್ ಟ್ರೈಬ್ಸ್‌ಗೆ ೫ ಪರ್ಸೆಂಟ್, ಈ ಒಂದು ಫಿಗರ್ಸ್ ತಮಗೆ ಕೊಟ್ಟಿದ್ದೇನೆ. ಪ್ರಧಾನ ಮಂತ್ರಿಗಳೂ ಅದೇ ರಾಜ್ಯದಿಂದ ಬಂದವರು. ಉತ್ತರ ಪ್ರದೇಶದಲ್ಲಿ ಬ್ರಾಹ್ಮಣರೇ ೨೧ ವರ್ಷದಿಂದ ಮುಖ್ಯಮಂತ್ರಿಯಾಗಿದ್ದರು. ಮೈನಾರಿಟಿ ಕಮ್ಯೂನಿಟಿಯು ವೈಶ್ಯ ಜಾತಿಗೆ ಸೇರಿರುವರು ಮತ್ತು ಜಾತ್ ಜಾತಿಗೆ ಸೇರಿದವರು ಕೆಲವು ಸಮಯ ಮಾತ್ರ ಮುಖ್ಯಮಂತ್ರಿಯಾಗಿದ್ದರು. ಓಟಿಗೋಸ್ಕರ ಈಗ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳುವುದು ಶುರುವಾಗಿದೆ. ಆದರೆ ಅವರಿಗೆ ೪ನೇ ದರ್ಜೆ ಅಪಾಯಿಂಟ್‌ಮೆಂಟ್ ಸಹ ಸಾಕಷ್ಟು ಪ್ರಮಾಣದಲ್ಲಿ ಇಲ್ಲ. ಈ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ

	ಕ್ಲಾಸ್ ಒಂದು	ಕ್ಲಾಸ್ ಎರಡು	ಕ್ಲಾಸ್ ಮೂರು	ಕ್ಲಾಸ್ ನಾಲ್ಕು
ಕರ್ನಾಟಕ ರಾಜ್ಯ :	೩-೫೪	೩-೬೦	೬-೮೮	೧೭-೧೧
ಉತ್ತರ ಪ್ರದೇಶ :	೨-೦೪	not available	೫-೯೯	೬-೭೭

Bihar information not available.

ಐ.ಟಿ.ಐ. ನಲ್ಲಿ ಕೆಲಸ ಸಿಕ್ಕುವುದಕ್ಕೆ ಟ್ರೈನಿಂಗ್ ಕೊಟ್ಟು ಫಿಗರ್ಸ್ ಕೊಟ್ಟಿದ್ದಾರೆ.

		ಷೆಡ್ಯೂಲ್ಡ್ ಕ್ಯಾಸ್ಟ್		ಷೆಡ್ಯೂಲ್ಡ್ ಟ್ರೈಬ್ಸ್
ಬಿಹಾರ್ :	...	೫-೩	...	೭-೫
ಕರ್ನಾಟಕ :	...	೧೬-೫	...	೮-೦
ಉತ್ತರ ಪ್ರದೇಶ :	...	೧೩-೭	...	೦-೮

ಶ್ರೀ ಕೆ. ಶ್ರೀರಾಮುಲು.—ಶ್ರೀ ದೇವೇಗೌಡರು ಪಕ್ಕದ ರಾಜ್ಯ ಮದ್ರಾಸಿನ ಬಗ್ಗೆ ಹೇಳಿದರೆ ಒಳ್ಳೆಯದು.

ಶ್ರೀ ಹೆಚ್. ಡಿ. ದೇವೇಗೌಡ.—ಅದು ಬರದೇ ಹೋಗುವುದಿಲ್ಲ. ಈಗ ಉತ್ತರ ಪ್ರದೇಶ, ಬಿಹಾರ ಏತಕ್ಕೆ ತೆಗೆದುಕೊಂಡೆ ಎಂದರೆ, ಪ್ರೈಮಿನಿಸ್ಟರ್ ಮತ್ತು ಶ್ರೀಮಾನ್ ಜಗಜೀವನ್‌ರಾಂ, ಅವರುಗಳು ಆ ರಾಜ್ಯಗಳಿಂದ ಬಂದಿದ್ದಾರೆ. ಅದಕ್ಕೋಸ್ಕರ ಹೇಳಿದೆ. ಇನ್ನು ಯಾವ ಯಾವ ಜಾತಿಗೆ ಎಷ್ಟೆಷ್ಟು ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ ಎನ್ನುವ ಬಗ್ಗೆ ೧೯೭೦ರ ಅಂಕಿಅಂಶ ಕೊಡುತ್ತೇನೆ.

Regarding the number of reserved vacancies, notified and filled up by the Government though the employment exchanges in each State

	ಷೆಡ್ಯೂಲ್ಡ್ ಟ್ರೈಬ್ಸ್
ಬಿಹಾರ್ :	೪೦
ಕರ್ನಾಟಕ :	೬೯
ಉತ್ತರ ಪ್ರದೇಶ :	೩೨

ಅರ್ಜಿ ಕಡಿಮೆ ಹಾಕಿದ್ದು ಎಂದು ತಿಳಿದುಕೊಳ್ಳಬೇಡಿ, ಉತ್ತರ ಪ್ರದೇಶ ೪೧ ಸಾವಿರ ಸ್ಪಾನಸರ್ ಮಾಡಿರುವುದು. ಆದರೆ ಅಪಾಯಿಂಟ್‌ಮೆಂಟ್ ಕೊಟ್ಟಿರುವುದು-೩೨.

	ಷೆಡ್ಯೂಲ್ಡ್ ಕಾಸ್ಟ್
ಬಿಹಾರ :	೪೭
ಕರ್ನಾಟಕ :	೬೮೦
ಉತ್ತರ ಪ್ರದೇಶ :	೭೯೦

ಈ ಬಗ್ಗೆ ಕರ್ನಾಟಕದಲ್ಲಿ ಸಮರ್ಪಕವಾಗಿ ನಡೆದಿಲ್ಲ ಎಂದು ಒಪ್ಪಿಕೊಳ್ಳೋಣ. ಇನ್ನು ಹೌಸಿಂಗ್ ಸ್ಕೀಮಿಂಗೆಬರುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರದ ಕಮಿಟಿಯವರು ಹೇಳಿದಮಾತನ್ನು ಕೋಟ್ ಮಾಡಿದರೆ ಒಳ್ಳೆಯದು ಎಂದು ಕಾಣುತ್ತದೆ. The Committee are not in agree ment with the views of the department of Social Welfare, Scheduled Caste and Scheduled Tribes received due consideration under general sector. ಅವರು ಬಹಳ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಹೇಳಿದ್ದಾರೆ. ಮಿನಿಸ್ಟ್ರಿ ಆಫ್ ಸೋಷಿಯಲ್

ವೆಲ್‌ಫೇರ್ ಅಂಡ್ ಹೌಸಿಂಗ್ ಅವರ ಮೇಲೆ ಮತ್ತು ಪ್ಲಾನಿಂಗ್ ಕಮಿಷನ್ ಮೇಲೆ ಸಾಕಷ್ಟು ಕ್ರಿಟಿಸೈಸ್ ಮಾಡಿದ್ದಾರೆ. ಇದು ಬಹಳ ದೊಡ್ಡ ಸಮಸ್ಯೆ, ಹಣ ಕೊಡುವುದರಿಂದ ಏನೇನೂ ಆಗುವುದಿಲ್ಲ ಎನ್ನುವ ಬಗ್ಗೆ ಸಾಕಷ್ಟು ಕಾಮೆಂಟ್ ಮಾಡಿದ್ದಾರೆ.

1-00 P. M.

ಗವರ್ನಮೆಂಟ್ ಆಫ್ ಇಂಡಿಯಾದವರು ನೇಮಕ ಮಾಡಿರುವ ಷೆಡ್ಯೂಲ್ ಕ್ಲಾಸ್ ಕಮಿಷನ್ ಅವರು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಕರ್ನಾಟಕದಲ್ಲಿ ಹೌಸಿಂಗ್ ಸೊಸೈಟಿ ಮಾಡಿ ಎಂದು ೪ ಕೋಟಿ ರೂಪಾಯಿ ಕೊಟ್ಟಿರುವರು,

> "The Corporation has enrolled 184 Scheduled Castes and Scheduled Tribes. So far the Corporation has sanctioned more than 4 crores to 174 primary scheduled castes societes for construction of 20,000 houses and 10,000 houses were completed"

ಜೊತೆಗೆ ಜನರಲ್ ಸ್ಕೀಂಗೆ ಒಂದು ಮನೆಗೆ ೨೦೦-೩೦೦ ರೂಪಾಯಿ ಕೊಟ್ಟಿರುವರು. ಅದನ್ನು ಮೆನ್‌ಷನ್‌ಮಾಡಿ ಅಪ್ರೀಷಿಯೇಟ್ ಮಾಡಿದ್ದಾರೆ. ಒಕ್ಕಲಿಗರು, ಲಿಂಗಾಯಿತರು ಮಂತ್ರಿಗಳಾಗಿದ್ದಾಗ ಇಷ್ಟು ಮಾಡುವುದಕ್ಕೆ ಅವಕಾಶ ಕೊಟ್ಟರು.

ಶ್ರೀ ಎನ್. ರಾಚಯ್ಯ.—ಆದರೆ ನಾನು ಮಾಡಿದ್ದು ಸಾಲದು ಎಂದು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅದೇ ರೀತಿ ಯು. ಪಿ. ದು ಓದುತ್ತೇನೆ.

> "There are 54 districts in U. P. For example in U. P. an amount of Rs. one lakh was allotted for construction of houses for schduled castes during the year 1970-71."

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಪ್ರಿಂಟಿಂಗ್ ಮಿಸ್ಟೇಕ್ ಇರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಗವರ್ನಮೆಂಟ್ ಆಫ್ ಇಂಡಿಯಾ ಪಬ್ಲಿಕೇಷನ್ಸ್ ಎನ್ನುಬಿಟ್ಟರೂ ಪ್ರಿಂಟಿಂಗ್ ಮಿಸ್ಟೇಕ್ ಎಂದು ಇಟ್ಟುಕೊಳ್ಳೋಣ. There are 54 districts in U. P. where each beneficiary is supposed to receive Rs. 500 as subsidy and Rs. 2000 as loan. ಇದು ಯಾವುದಕ್ಕೂ ಹುಂಚಲಿಕ್ಕೆ ಆಗುವುದಿಲ್ಲ ಎಂದು ಕಮಿಷನರ್ ಅವರು ಕಾಮೆಂಟ್ ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೋಸ್ಕರ ೨೦೦ ಕೋಟಿ ರೂಪಾಯಿಗಳನ್ನು ಮೊನ್ನೆ ನಡೆದ ಚುನಾವಣೆಯಲ್ಲಿ ಕೊಟ್ಟಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ನಿರ್ಣಯ ಬಹಳ ಗಹನವಾದುದು ಮತ್ತು ಬಹಳ ಪ್ರಾಮುಖ್ಯವಾದುದು. ಎಷ್ಟು ದಿವಸ ಇದು ನಡೆಯುತ್ತದೆ ಎಂದು ಈಗಲೇ ನಿರೀಕ್ಷೆ ಮಾಡಿ ಹೇಳುವುದು ಕಷ್ಟ. ಇದಕ್ಕೆ ಸಾಕಷ್ಟು ಕಾಲಾವಕಾಶ ಕೊಡಬೇಕಾಗುತ್ತದೆ. ಆದಕಾರಣ ಇದನ್ನು ಇನ್ನೊಂದು ದಿವಸ ತೆಗೆದುಕೊಂಡು ಚರ್ಚೆ ಮಾಡೋಣ.

ಅಧ್ಯಕ್ಷರು.—ಸೋಮವಾರ ಪಿ. ಡಬ್ಲ್ಯು. ಡಿ. ಡಿಮ್ಯಾಂಡ್ ಮೇಲೆ ಚರ್ಚೆ ಇದೆ. Now the House will rise and meet at 1 p. m. on Monday.

The Hose adjourned at Five minutes past One of the clock to meet again at One of the clock on Monday 6th May 1974.

WD 654—GPB—550—30-9-1974